ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ

ವಾರ್ತಾಪತ್ರ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೦೫
ಸಂಚಿಕೆ : ೧೩ ೧೩ (ಖಾಸಗಿ ಪ್ರಸಾರಕ್ಕಾಗಿ ಮಾತ್ರ) ಜನವರಿ – ಮಾರ್ಚ್ ೨೦೧೦


ಸಂಪಾದಕರು
ಎಸ್.ವಿ. ಶ್ರೀನಿವಾಸರಾವ್

ಪರಿವಿಡಿ

ವಿಳಾಸ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ,
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು – ೧೯
ದೂರವಾಣಿ : ೨೬೬೧೫೪೭೭/೨೬೬೭೬೭೭೩
ಇಮೇಲ್: bmsritrust@gmail.com
ಶಾಖೆ
ಬಿ.ಎಂ.ಶ್ರೀ. ಶತಮಾನೋತ್ಸವ ಭವನ
ಬೆಳ್ಳೂರು, ನಾಗಮಂಗಲ ತಾ॥, ಮಂಡ್ಯ ಜಿಲ್ಲೆ

'ಶ್ರೀಉತ್ಸವ', ಬಿ.ಎಂ.ಶ್ರೀ ಪ್ರತಿಮೆಗೆ ಮಾಲಾರ್ಪಣೆ ಅಂತರಜಾಲತಾಣ (ವೆಬ್‌ಸೈಟ್) ಉದ್ಘಾಟನೆ







೧೩-೦೧-೨೦೧೦ 'ಶ್ರೀ ಉತ್ಸವ' **ಬಿ.ಎಂ.ಶ್ರೀ ಪ್ರತಿಮೆಗೆ ಮಾಲಾರ್ಪಣೆ** ಪ್ರತಿವರ್ಷದಂತೆ ಈ ವರ್ಷವೂ ನ್ಯಾಷನಲ್ ಕಾಲೇಜು ವೃತ್ತದಲ್ಲಿರುವ ಬಿ.ಎಂ.ಶ್ರೀ. ಪ್ರತಿಮೆಗೆ ಮಾಲಾರ್ಪಣೆ ಕಾರ್ಯ ನೆರವೇರಿತು. ಡಾ. ದೊಡ್ಡರಂಗೇಗೌಡರು ಮಾಲಾರ್ಪಣೆ ಮಾಡಿ ಬಿ.ಎಂ.ಶ್ರೀ. ಅವರ ಗುಣಗಾನ ಮಾಡಿದರು. ಶ್ರೀಮತಿ ರಮಾದೇವಿ ವಿಶ್ವೇಶ್ವರಯ್ಯ ಅವರು ಕನ್ನಡಗೀತೆ ಜೊತೆಯಲ್ಲಿ ಬಿ.ಎಂ.ಶ್ರೀ. ಅವರ ಕವನಗಳನ್ನು ಸುಶ್ರಾವ್ಯವಾಗಿ ಹಾಡಿದರು. ಡಾ. ನಾ. ಗೀತಾಚಾರ್ಯ ಎಲ್ಲರನ್ನು ಸ್ವಾಗತಿಸಿದರು. ಬಿ.ಎಂ.ಶ್ರೀ. ಅವರ ಬಗ್ಗೆ ಸಾಹಿತಿ ಎಸ್.ವಿ. ಶ್ರೀನಿವಾಸರಾವ್ ಮಾತನಾಡಿ ಎಲ್ಲರಿಗೂ ವಂದನೆ ಸಲ್ಲಿಸಿದರು.

'ಶ್ರೀಉತ್ಸವ'ದ ಎರಡನೆ ಭಾಗವಾಗಿ, ಪ್ರತಿಷ್ಠಾನ ಬಿ.ಎಂ.ಶ್ರೀ. ಕಲಾಭವನದಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಮಹತ್ವದ ಅಂತರಜಾಲತಾಣ(ವೆಬ್‌ಸೈಟ್) ಉದ್ಘಾಟನಾ ಕಾರ್ಯಕ್ರಮ ಜರುಗಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಕಾರ್ಯದರ್ಶಿಗಳಾದ ಸನ್ಮಾನ್ಯ ಶ್ರೀ ಬಿ.ಆರ್.ಜಯರಾಮರಾಜೇ ಅರಸ್, ಭಾ.ಆ.ಸೇ. ಅವರು ವೆಬ್‌ಸೈಟ್ ಚಾಲು ಮಾಡುವ ಮೂಲಕ ಉದ್ಘಾಟನಾ ಕಾರ್ಯ ನೆರವೇರಿಸಿ, ಈ ವೆಬ್‌ಸೈಟ್ ಉಪಯುಕ್ತತೆ ಬಗ್ಗೆ ಮಾತನಾಡಿ ಈ ಮೂಲಕ ಬಿ.ಎಂ.ಶ್ರೀ ಅವರು ಪ್ರಪಂಚಾದ್ಯಂತಾ ವಿಶೇಷ ವ್ಯಕ್ತಿಯಾಗಿ ವಿರಾಜಿಸುವಂತಾಗಿದೆ ಎಂದು

(ಪುಟ ೪ ನೋಡಿ)

ಸಂಪಾದಕೀಯ

ಪ್ರೊ. ಎಂ.ವಿ.ಸೀತಾರಾಮಯ್ಯ ಅವರಿಂದ ೧೯೭೯ರಲ್ಲಿ ಸ್ಥಾಪಿತಗೊಂಡ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ೧೯೯೪ರಲ್ಲಿ ಅದ್ದೂರಿಯ ರಜತಮಹೋತ್ಸವ ಆಚರಿಸಿಕೊಂಡು ಸ್ವರ್ಣ ಮಹೋತ್ಸವದತ್ತ ಧಾವಿಸುತ್ತಿದೆ. ಪ್ರಾರಂಭದಲ್ಲಿ ಪ್ರೊ. ಎಂ.ವಿ.ಸೀ ಅವರ ಮನೆಯಲ್ಲಿ ಪ್ರಾರಂಭಗೊಂಡ ಪ್ರತಿಷ್ಠಾನ ಈಗ ಮೂರು ಮಜಲಿನ ಬೃಹತ್ ಭವನದಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಬಹುದೊಡ್ಡ ಪ್ರಮಾಣದಲ್ಲಿ ವೃದ್ಧಿಸಿಕೊಂಡು ಕಾರ್ಯನಿರತವಾಗಿದೆ. ಪ್ರತಿಷ್ಠಾನ ನಡೆಸುತ್ತಿರುವ ಸಾಹಿತ್ಯಿಕ, ಸಾಂಸ್ಕೃತಿಕ, ಕಾರ್ಯಚಟುವಟಿಕೆಗಳನ್ನು ಮೆಚ್ಚಿ 'ಸಾಹಿತ್ಯಾಸಕ್ತ ಸಂಸ್ಥೆ'ಗಳು ಹಾಗೂ ಪ್ರಸಿದ್ಧ ವ್ಯಕ್ತಿಗಳು ೫ ಸಾವಿರದಿಂದ ೧ ಲಕ್ಷದವರೆಗೆ ದತ್ತಿ ಹಣವನ್ನಿರಿಸಿ ಸಾಹಿತ್ಯಿಕ ಕಾರ್ಯಚಟುವಟಿಕೆಗಳನ್ನು ನಿರಂತರ ನಡೆಸಿಕೊಂಡು ಬರಲು ಸೂಚಿಸಿರುತ್ತಾರೆ. ಇದುವರೆಗೆ ನಮ್ಮ ಪ್ರತಿಷ್ಠಾನದಲ್ಲಿ ೪೦ ದತ್ತಿಗಳಿವೆ. ದತ್ತಿ ದಾನಿಗಳ ಇಚ್ಛೆಯಂತೆ ಅವರು ತಿಳಿಸಿರುವ ತಿಂಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಪಲವು ಅಭಿಮಾನಿಗಳು ಪ್ರತಿಷ್ಠಾನಕ್ಕೆ ಅಲ್ಲದೆ ನಾವು ಹಮ್ಮಿಕೊಂಡಿರುವ ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮಗಳಿಗೆ ಉದಾರ ಧನಸಹಾಯ ಮಾಡುತ್ತಿದ್ದಾರೆ. ಇವರೆಲ್ಲರ ಉದಾರ ಕೊಡುಗೆಗಳನ್ನು ಕೃತಜ್ಞತೆಯಿಂದ ನೆನೆಯುತ್ತಿದ್ದೇವೆ. ದಾನಿಗಳ ಅಭೀಷ್ಟದಂತೆಯೇ ಕಾರ್ಯಕ್ರಮಗಳನ್ನೂ ನಡೆಸಿಕೊಂಡು ಬರುತ್ತೇವೆಂದು ಆಶ್ವಾಸನೆ ನೀಡುತ್ತಿದ್ದೇವೆ. ಒಂದು ದಿನದ ಕಾರ್ಯಕ್ರಮವನ್ನು ನಡೆಸಲು (ಅತಿಥಿಗಳಿಗೆ ಗೌರವಧನ, ವಾಹನವೆಚ್ಚ, ವೇದಿಕೆಯ ವೆಚ್ಚ, ನೆನಪಿನ ಕಾಣಿಕೆ, ಆಹ್ವಾನ ಪತ್ರಿಕೆ ಮುದ್ರಣ, ಅಂಚೆವೆಚ್ಚ, ಲಘು ಉಪಹಾರ ಮುಂತಾದವಕ್ಕೆ) ಪ್ರತಿಷ್ಠಾನಕ್ಕೆ ಕೊನೆಯ ಪಕ್ಷ ಐದು ಸಾವಿರ ಬೇಕಾಗಿರುತ್ತದೆ. ಇಂತಹ ಒಂದು ದಿನದ ಕಾರ್ಯಕ್ರಮ ನಡೆಸಲು ಈಗ ಬ್ಯಾಂಕ್‌ಗಳು, ಠೇವಣಿಗಳ ಮೇಲೆ ನೀಡುತ್ತಿರುವ ಬಡ್ಡಿ ದರದ ರೀತ್ಯ ದತ್ತಿ ಠೇವಣಿ ಕೊನೆಯ ಪಕ್ಷ ರೂ. ೫೦,೦೦೦/- ಇರಬೇಕಾಗುತ್ತದೆ. ಈ ಅನಿವಾರ್ಯತೆಯಿಂದಾಗಿ ಈಗೀಗ ನಾವು ಹಲವು ಸಣ್ಣ ಮೊತ್ತದ ದತ್ತಿಗಳನ್ನು ಒಟ್ಟಿಗೆ ಸೇರಿಸಿ ಒಂದು ದಿನದ ಕಾರ್ಯಕ್ರಮವನ್ನು ರೂಪಿಸಿ ನಡೆಸುತ್ತಿದ್ದೇವೆ. **ಸಣ್ಣ ಮೊತ್ತ ಇರಿಸಿರುವ ದಾನಿಗಳು ನಿಗದಿತ ದತ್ತಿ ಕಾರ್ಯಕ್ರಮ ಪ್ರತ್ಯೇಕವಾಗಿ ನಡೆಸಬಯಸಿದರೆ ದತ್ತಿ ಮೊಬಲಗನ್ನು ರೂ. ೫೦,೦೦೦/- ಗಳಿಗೆ ಹೆಚ್ಚಾಗಿಸಬೇಕಾಗುತ್ತದೆ ಎಂದು ಸವಿನಯದಿಂದ ಸೂಚಿಸಬಯಸುತ್ತೇವೆ.**

ನಮ್ಮ ಪ್ರತಿಷ್ಠಾನ ಹಂಪಿ ವಿಶ್ವವಿದ್ಯಾಲಯದ ಮಾನ್ಯತೆ ಪಡೆದು ಎಂ.ಫಿಲ್ ಹಾಗೂ ಪಿಎಚ್.ಡಿ ವಿದ್ಯಾರ್ಥಿಗಳಿಗೆ ವಿದ್ವಾಂಸರುಗಳಿಂದ ಸೂಕ್ತ ಮಾರ್ಗದರ್ಶನ ನೀಡಲು ತರಬೇತಿ ಸಹ ನೀಡುತ್ತಿದೆ. ಈಗಾಗಲೇ ೬ ಜನ ಪಿಎಚ್.ಡಿ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದಿದ್ದಾರೆ. ಇದು ತರಬೇತಿಯ ಶ್ರೇಷ್ಠತೆಯನ್ನು ಪ್ರತಿಬಿಂಬಿಸುತ್ತದೆ.

ನಮ್ಮ ಪ್ರತಿಷ್ಠಾನವು ಹಳಗನ್ನಡಶಾಸ್ತ್ರದಲ್ಲಿ ಸ್ನಾತಕೋತ್ತರ ಡಿಪ್ಲೋಮಾ ನಡೆಸಲು ಕುಪ್ಪಂನ ದ್ರಾವಿಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆಯಲು ಸಹ ಪ್ರಯತ್ನ ನಡೆಸಿದೆ. ಪ್ರತಿಷ್ಠಾನದಲ್ಲಿ ವಿದ್ವತ್ ಗ್ರಂಥಗಳ ಸುರಕ್ಷಿತ ಬೃಹತ್ ಭಂಡಾರವಿದೆ. ೩,೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳ ಸಂಗ್ರಹವಿದೆ. ಎಂ.ವಿ.ಸೀ. ಶತಮಾನೋತ್ಸವ ವರ್ಷ (೦೯-೦೯-೨೦೦೯, ೦೯-೦೯-೨೦೧೦) ವನ್ನು ಹಸ್ತಪ್ರತಿ ಅಧ್ಯಯನ ವರ್ಷವನ್ನಾಗಿ ಆಚರಿಸಲು ನಿರ್ಧರಿಸಿ ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮ ನಡೆಸುವ ಕಡೆಗಳಲ್ಲೆಲ್ಲಾ ಮಹತ್ವದ ಹಸ್ತಪ್ರತಿಗಳ ಪ್ರದರ್ಶನ ಸಹ ನಡೆಸುತ್ತಿದ್ದೇವೆ. ವಿಚಾರಗೋಷ್ಠಿ ಉಪನ್ಯಾಸ, ಸಾಹಿತ್ಯ/ಕಮ್ಮಟ ಕವಿಗೋಷ್ಠಿ, ಗ್ರಂಥ ಪ್ರಕಟಣೆ ಮುಂತಾದ ಚಟುವಟಿಕೆಗಳ ಜೊತೆಯಲ್ಲಿ ಪ್ರತಿ ತಿಂಗಳೂ 'ಸಿರಿ ಸಂಗೀತ', 'ಗೀತಗಾಯನ' ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳೂ ನಡೆಯುತ್ತಿವೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾಹಿತಿ ನೀಡುವ ಸಲುವಾಗಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಇತ್ತೀಚೆಗೆ ವೆಬ್‌ಸೈಟ್ ಸಹ ತೆರೆದಿದೆ. ಪ್ರತಿಷ್ಠಾನ ತನ್ನ ಚಟುವಟಿಕೆಗಳ ಜಾಲವನ್ನು ಇನ್ನೂ ವೃದ್ಧಿಸಿಕೊಳ್ಳಬಯಸಿದೆ. ಈ ಬಗ್ಗೆ ಸಾಹಿತ್ಯಾಸಕ್ತರು, ಹಿತೈಷಿಗಳು, ಪ್ರತಿಷ್ಠಾನದ ಸಾಮಾನ್ಯ ಸದಸ್ಯರುಗಳು ಹಾಗೂ ಕನ್ನಡಾಭಿಮಾನಿಗಳು ತಮ್ಮ ಸೂಕ್ತ ಸಲಹೆಗಳನ್ನು ನೀಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

■ ಎಸ್.ವಿ. ಶ್ರೀನಿವಾಸರಾವ್
ಸಂಪಾದಕರು

ತಿಷ್ಠಾನದ ವಾರ್ತೆ



ಎಂ.ವಿ.ಸೀ. ಶತಮಾನೋತ್ಸವ ತಿಂಗಳ ಉಪನ್ಯಾಸ ಮಾಲೆ-೪

-೦೧-೨೦೧೦ ಕಾರ್ಯಕ್ರಮ ಜರುಗಿತು. ಇದನ್ನು .ಎಲ್ ಬೆಂಗಳೂರಿನ ವಿಮಾನ ಕನ್ನಡ ಸಂಘ ಪ್ರಾಯೋಜಿಸಿತ್ತು. ಜಯಾ ಸುಬ್ಬರಾಜ್ ಅಧ್ಯಕ್ಷತೆ ವಹಿಸಿದ್ದರು. ಡಾ. ಜಿ.ಬಿ. ರವರು ಎಂ.ವಿ.ಸೀ. ಅವರ ಕಾವ್ಯಗಳನ್ನು ಕುರಿತು ಬೋಧಪ್ರದ ಸ ನೀಡಿದರು. ಪ್ರಾರಂಭದಲ್ಲಿ ಶ್ರೀ ರಾ.ನಂ. ಚಂದ್ರಶೇಖರ್ ್ನು ಸ್ವಾಗತಿಸಿದರು. ಶ್ರೀ ಶ್ರ.ದೇ.ಪಾರ್ಶ್ವನಾಥ್ ಕಾರ್ಯಕ್ರಮ ಸಿದರು. ವಿಮಾನ ಕನ್ನಡ ಸಂಘದ ಪ್ರಧಾನಕಾರ್ಯದರ್ಶಿ ಎಸ್. ಶಶಿಧರ್ ವಂದನಾರ್ಪಣೆ ಮಾಡಿದರು. ಪ್ರತಿಷ್ಠಾನದಲ್ಲಿ ಹಸ್ತಪ್ರತಿ ಪ್ರದರ್ಶನ ಏರ್ಪಡಿಸಲಾಗಿತ್ತು.

-೦೨-೨೦೧೦ ಎಂ.ವಿ.ಸೀ ಶತಮಾನೋತ್ಸವ ತಿಂಗಳ ಸ ಮಾಲೆ-೫ ನಡೆಯಿತು. ಪ್ರಾಯೋಜಕರು : ಕರ್ನಾಟಕ ತಿಕ ವೇದಿಕೆ ಕುವೆಂಪುನಗರ, ಬೆಂಗಳೂರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಎಂ.ಎಲ್. ಲಲಿತಮ್ಮ ರು. ಪ್ರೊ.ಕೆ.ಎಸ್. ಮಧುಸೂದನ ಅವರು 'ಎಂ.ವಿ.ಸಿ. ಅವರ ನ ಕಲೆ' ಕುರಿತು ಉಪನ್ಯಾಸ ನೀಡಿದರು. ಮಧುಸೂದನ ಎಂ.ವಿ.ಸೀ. ಅವರ ಖಾಸಾ ಶಿಷ್ಯರಾಗಿದ್ದುದರಿಂದ ಅನೇಕ ಕ ಘಟನೆಗಳನ್ನು ನಿರೂಪಿಸಿ ಅವರು ಶಿಷ್ಯರತ್ತ ತೋರುತ್ತಿದ್ದ ಾತ್ಸಲ್ಯದ ಮೇಲೆ ಬೆಳಕು ಚೆಲ್ಲಿ ಎಂ.ವಿ.ಸೀ ಅವರಿಗೆ ಗುರುಭಕ್ತಿ ದರು. ಮುಖ್ಯ ಅತಿಥಿಗಳಾಗಿ ಶ್ರೀ ಎನ್. ನಾಗರಾಜು ದ್ದರು. ಸಾಂಸ್ಕೃತಿಕ ವೇದಿಕೆಯ ಶ್ರೀ ಎಲ್. ರಾಮಕೃಷ್ಣ ಸಹ ಯ ಮೇಲೆ ಉಪಸ್ಥಿತರಿದ್ದರು. ಶ್ರೀ ರಾ.ನಂ. ಚಂದ್ರಶೇಖರ್, ದೇ. ಪಾರ್ಶ್ವನಾಥ ಅವರು ಕಾರ್ಯಕ್ರಮದ ಸ್ವಾಗತ, ರ್ಪಣೆ ನೆರವೇರಿಸಿದರು.

೦೯-೦೩-೨೦೧೦ ಎಂ.ವಿ.ಸೀ ಶತಮಾನೋತ್ಸವ ತಿಂಗಳ ಉಪನ್ಯಾಸ ಮಾಲೆ-೬

ಅಖಿಲ ಕರ್ನಾಟಕ ಮಕ್ಕಳ ಸಾಹಿತ್ಯ ಪರಿಷತ್ತಿನ ಸಹಯೋಗದೊಡನೆ ಏರ್ಪಡಿಸಲಾಗಿತ್ತು. ಶ್ರೀ ಬಾಬು ಕೃಷ್ಣಮೂರ್ತಿ, ಸಂಪಾದಕರು ಕರ್ಮವೀರ: ಅಧ್ಯಕ್ಷತೆ ವಹಿಸಿದ್ದರು. ಡಾ. ಎಚ್.ಎ. ಸತ್ಯವತಿ ಕನ್ನಡ ವಿಭಾಗದ ಮುಖ್ಯಸ್ಥರು. ಎಸ್.ಜೆ.ಆರ್.ಸಿ. ಕಾಲೇಜು ಬೆಂಗಳೂರು, ಅವರು ತಮ್ಮ ಉಪನ್ಯಾಸದಲ್ಲಿ ಎಂ.ವಿ.ಸೀ. ಅವರ 'ಮಕ್ಕಳ ಸಾಹಿತ್ಯ ಕುರಿತು' ಸುದೀರ್ಘ ವಿವರಣೆ ನೀಡಿ ಸಾಹಿತ್ಯದ ಸಿಹಿಯನ್ನು ಸವಿಯುವಂತೆ ಮಾಡಿದರು. ಅಖಿಲ ಕರ್ನಾಟಕದ ಮಕ್ಕಳ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್.ವಿ. ಶ್ರೀನಿವಾಸರಾವ್‌ರವರು ಅ.ಕ.ಮ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ನಿರುಪಮಾ ಅವರ ಅನುಪಸ್ಥಿತಿಯಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿ ಮಕ್ಕಳ ಸಾಹಿತ್ಯ ಪರಿಷತ್ತಿನ ಉಗಮ, ಬೆಳವಣಿಗೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ, 'ಮಕ್ಕಳ ಸಾಹಿತ್ಯ' ಸಾಹಿತ್ಯ ವೃಕ್ಷದ ತಾಯಿ ಬೇರಾಗಿರುವುದರಿಂದ ಇದಕ್ಕೆ ಸಾಕಷ್ಟು ಪ್ರಾತಿನಿಧ್ಯ ನೀಡಬೇಕಾದ ಅವಶ್ಯಕತೆ ಇದೆ ಎಂಬುದನ್ನು ಒತ್ತಿ ಹೇಳಿ-ಸಾಹಿತ್ಯಾಸಕ್ತರು ಹಾಗೂ ಸಾಹಿತಿಗಳು ಈ ಕ್ಷೇತ್ರವನ್ನು ಸಂಪನ್ನವಾಗಿ ಬೆಳೆಸಲು ಮುಂದೆ ಬರಬೇಕೆಂದು ವಿನಂತಿಸಿಕೊಂಡರು. ಡಾ. ನಾ. ಗೀತಾಚಾರ್ಯ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಣ ಸಂರಕ್ಷಣೆಯ ಅವಶ್ಯಕತೆ ಕುರಿತು ವಿವರಣೆ ನೀಡಿದರು. ಪ್ರಾರಂಭದಲ್ಲಿ ಶ್ರೀಮತಿ ಚಂದ್ರಲೇಖಾ ಮತ್ತು ಶ್ರೀಮತಿ ಮೇಘನಾ ಅವರು ಪ್ರಾರ್ಥನೆ ಮಾಡಿದ್ದರು.



ಡಾ. ಮುಳುಕುಂಟೆ ರಮೇಶ್ ಕಾರ್ಯಕ್ರಮವನ್ನು ನಿರೂಪಿಸಿ, ಕೊನೆಯಲ್ಲಿ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ನಿರುಪಮಾರವರ ಪುತ್ರ ಶ್ರೀ ರವೀಂದ್ರನಾಥ್, ಪುತ್ರಿ ಶ್ರೀಮತಿ ಉಷಾಮೂರ್ತಿ ಮುಂತಾದ ಕುಟುಂಬದ ಸದಸ್ಯರುಗಳು ಹಾಜರಿದ್ದರು.

ದತ್ತಿ ಸಾಹಿತ್ಯ ಪ್ರಶಸ್ತಿಗಳ ಪ್ರದಾನ

೧೨-೦೩-೨೦೧೦ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು. ನಾಡೋಜ ಜಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್.ವಿ. ಶ್ರೀನಿವಾಸರಾವ್ ಅವರು ಅತಿಥಿಗಳನ್ನು ಸ್ವಾಗತಿಸಿದರು. ಪ್ರೊ. ಎಂ.ಆರ್. ದೊರೆಸ್ವಾಮಿ ಎಂ.ಎಲ್.ಸಿ., ಸ್ಥಾಪಕ ಕಾರ್ಯದರ್ಶಿ ಪಿ.ಇ.ಎಸ್. ಶಿಕ್ಷಣ ಸಂಸ್ಥೆಗಳು, ಅವರು ಡಾ. ತಮಿಳ್ ಸೆಲ್ವಿಯವರ 'ನೇಪಥ್ಯ', ಶ್ರೀ ಎಂ.ಎಸ್.

ಸಂಪಾದಕೀಯ

ಪ್ರೊ. ಎಂ.ವಿ.ಸೀತಾರಾಮಯ್ಯ ಅವರಿಂದ ೧೯೭೯ರಲ್ಲಿ ಸ್ಥಾಪಿತಗೊಂಡ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ೧೯೯೪ರಲ್ಲಿ ಅದ್ದೂರಿಯ ರಜತಮಹೋತ್ಸವ ಆಚರಿಸಿಕೊಂಡು ಸ್ವರ್ಣ ಮಹೋತ್ಸವದತ್ತ ಧಾವಿಸುತ್ತಿದೆ. ಪ್ರಾರಂಭದಲ್ಲಿ ಪ್ರೊ. ಎಂ.ವಿ.ಸೀ ಅವರ ಮನೆಯಲ್ಲಿ ಪ್ರಾರಂಭಗೊಂಡ ಪ್ರತಿಷ್ಠಾನ ಈಗ ಮೂರು ಮಜಲಿನ ಬೃಹತ್ ಭವನದಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಬಹುದೊಡ್ಡ ಪ್ರಮಾಣದಲ್ಲಿ ವೃದ್ಧಿಸಿಕೊಂಡು ಕಾರ್ಯನಿರತವಾಗಿದೆ. ಪ್ರತಿಷ್ಠಾನ ನಡೆಸುತ್ತಿರುವ ಸಾಹಿತ್ಯಿಕ, ಸಾಂಸ್ಕೃತಿಕ, ಕಾರ್ಯಚಟುವಟಿಕೆಗಳನ್ನು ಮೆಚ್ಚಿ 'ಸಾಹಿತ್ಯಾಸಕ್ತ ಸಂಸ್ಥೆ'ಗಳು ಹಾಗೂ ಪ್ರಸಿದ್ಧ ವ್ಯಕ್ತಿಗಳು ೫ ಸಾವಿರದಿಂದ ೧ ಲಕ್ಷದವರೆಗೆ ದತ್ತಿ ಹಣವನ್ನಿರಿಸಿ ಸಾಹಿತ್ಯಿಕ ಕಾರ್ಯಚಟುವಟಿಕೆಗಳನ್ನು ನಿರಂತರ ನಡೆಸಿಕೊಂಡು ಬರಲು ಸೂಚಿಸಿರುತ್ತಾರೆ. ಇದುವರೆಗೆ ನಮ್ಮ ಪ್ರತಿಷ್ಠಾನದಲ್ಲಿ ೪೦ ದತ್ತಿಗಳಿವೆ. ದತ್ತಿ ದಾನಿಗಳ ಇಚ್ಛೆಯಂತೆ ಅವರು ತಿಳಿಸಿರುವ ತಿಂಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಪಲವು ಅಭಿಮಾನಿಗಳು ಪ್ರತಿಷ್ಠಾನಕ್ಕೆ ಅಲ್ಲದೆ ನಾವು ಹಮ್ಮಿಕೊಂಡಿರುವ ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮಗಳಿಗೆ ಉದಾರ ಧನಸಹಾಯ ಮಾಡುತ್ತಿದ್ದಾರೆ. ಇವರೆಲ್ಲರ ಉದಾರ ಕೊಡುಗೆಗಳನ್ನು ಕೃತಜ್ಞತೆಯಿಂದ ನೆನೆಯುತ್ತಿದ್ದೇವೆ. ದಾನಿಗಳ ಅಭೀಷ್ಟದಂತೆಯೇ ಕಾರ್ಯಕ್ರಮಗಳನ್ನೂ ನಡೆಸಿಕೊಂಡು ಬರುತ್ತೇವೆಂದು ಆಶ್ವಾಸನೆ ನೀಡುತ್ತಿದ್ದೇವೆ. ಒಂದು ದಿನದ ಕಾರ್ಯಕ್ರಮವನ್ನು ನಡೆಸಲು (ಅತಿಥಿಗಳಿಗೆ ಗೌರವಧನ, ವಾಹನವೆಚ್ಚ, ವೇದಿಕೆಯ ವೆಚ್ಚ, ನೆನಪಿನ ಕಾಣಿಕೆ, ಆಹ್ವಾನ ಪತ್ರಿಕೆ ಮುದ್ರಣ, ಅಂಚೆವೆಚ್ಚ, ಲಘು ಉಪಹಾರ ಮುಂತಾದವಕ್ಕೆ) ಪ್ರತಿಷ್ಠಾನಕ್ಕೆ ಕೊನೆಯ ಪಕ್ಷ ಐದು ಸಾವಿರ ಬೇಕಾಗಿರುತ್ತದೆ. ಇಂತಹ ಒಂದು ದಿನದ ಕಾರ್ಯಕ್ರಮ ನಡೆಸಲು ಈಗ ಬ್ಯಾಂಕ್‌ಗಳು, ಠೇವಣಿಗಳ ಮೇಲೆ ನೀಡುತ್ತಿರುವ ಬಡ್ಡಿ ದರದ ರೀತ್ಯ ದತ್ತಿ ಠೇವಣಿ ಕೊನೆಯ ಪಕ್ಷ ರೂ. ೫೦,೦೦೦/- ಇರಬೇಕಾಗುತ್ತದೆ. ಈ ಅನಿವಾರ್ಯತೆಯಿಂದಾಗಿ ಈಗೀಗ ನಾವು ಹಲವು ಸಣ್ಣ ಮೊತ್ತದ ದತ್ತಿಗಳನ್ನು ಒಟ್ಟಿಗೆ ಸೇರಿಸಿ ಒಂದು ದಿನದ ಕಾರ್ಯಕ್ರಮವನ್ನು ರೂಪಿಸಿ ನಡೆಸುತ್ತಿದ್ದೇವೆ. **ಸಣ್ಣ ಮೊತ್ತ ಇರಿಸಿರುವ ದಾನಿಗಳು ನಿಗದಿತ ದತ್ತಿ ಕಾರ್ಯಕ್ರಮ ಪ್ರತ್ಯೇಕವಾಗಿ ನಡೆಸಬಯಸಿದರೆ ದತ್ತಿ ಮೊಬಲಗನ್ನು ರೂ. ೫೦,೦೦೦/- ಗಳಿಗೆ ಹೆಚ್ಚಾಗಿಸಬೇಕಾಗುತ್ತದೆ ಎಂದು ಸವಿನಯದಿಂದ ಸೂಚಿಸಬಯಸುತ್ತೇವೆ.**

ನಮ್ಮ ಪ್ರತಿಷ್ಠಾನ ಹಂಪಿ ವಿಶ್ವವಿದ್ಯಾಲಯದ ಮಾನ್ಯತೆ ಪಡೆದು ಎಂ.ಫಿಲ್ ಹಾಗೂ ಪಿಎಚ್.ಡಿ ವಿದ್ಯಾರ್ಥಿಗಳಿಗೆ ವಿದ್ವಾಂಸರುಗಳಿಂದ ಸೂಕ್ತ ಮಾರ್ಗದರ್ಶನ ನೀಡಲು ತರಬೇತಿ ಸಹ ನೀಡುತ್ತಿದೆ. ಈಗಾಗಲೇ ೬ ಜನ ಪಿಎಚ್.ಡಿ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಡೆದಿದ್ದಾರೆ. ಇದು ತರಬೇತಿಯ ಶ್ರೇಷ್ಠತೆಯನ್ನು ಪ್ರತಿಬಿಂಬಿಸುತ್ತದೆ.

ನಮ್ಮ ಪ್ರತಿಷ್ಠಾನವು ಹಳಗನ್ನಡಶಾಸ್ತ್ರದಲ್ಲಿ ಸ್ನಾತಕೋತ್ತರ ಡಿಪ್ಲೋಮಾ ನಡೆಸಲು ಕುಪ್ಪಂನ ದ್ರಾವಿಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆಯಲು ಸಹ ಪ್ರಯತ್ನ ನಡೆಸಿದೆ. ಪ್ರತಿಷ್ಠಾನದಲ್ಲಿ ವಿದ್ವತ್ ಗ್ರಂಥಗಳ ಸುರಕ್ಷಿತ ಬೃಹತ್ ಭಂಡಾರವಿದೆ. ೩,೦೦೦ಕ್ಕೂ ಹೆಚ್ಚು ಹಸ್ತಪ್ರತಿಗಳ ಸಂಗ್ರಹವಿದೆ. ಎಂ.ವಿ.ಸೀ. ಶತಮಾನೋತ್ಸವ ವರ್ಷ (೦೯-೦೯-೨೦೦೯, ೦೯-೦೯-೨೦೧೦) ವನ್ನು ಹಸ್ತಪ್ರತಿ ಅಧ್ಯಯನ ವರ್ಷವನ್ನಾಗಿ ಆಚರಿಸಲು ನಿರ್ಧರಿಸಿ ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮ ನಡೆಸುವ ಕಡೆಗಳಲ್ಲೆಲ್ಲಾ ಮಹತ್ವದ ಹಸ್ತಪ್ರತಿಗಳ ಪ್ರದರ್ಶನ ಸಹ ನಡೆಸುತ್ತಿದ್ದೇವೆ. ವಿಚಾರಗೋಷ್ಠಿ ಉಪನ್ಯಾಸ, ಸಾಹಿತ್ಯ/ಕಮ್ಮಟ ಕವಿಗೋಷ್ಠಿ, ಗ್ರಂಥ ಪ್ರಕಟಣೆ ಮುಂತಾದ ಚಟುವಟಿಕೆಗಳ ಜೊತೆಯಲ್ಲಿ ಪ್ರತಿ ತಿಂಗಳೂ 'ಸಿರಿ ಸಂಗೀತ', 'ಗೀತಗಾಯನ' ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳೂ ನಡೆಯುತ್ತಿವೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾಹಿತಿ ನೀಡುವ ಸಲುವಾಗಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಇತ್ತೀಚೆಗೆ ವೆಬ್‌ಸೈಟ್ ಸಹ ತೆರೆದಿದೆ. ಪ್ರತಿಷ್ಠಾನ ತನ್ನ ಚಟುವಟಿಕೆಗಳ ಜಾಲವನ್ನು ಇನ್ನೂ ವೃದ್ಧಿಸಿಕೊಳ್ಳಬಯಸಿದೆ. ಈ ಬಗ್ಗೆ ಸಾಹಿತ್ಯಾಸಕ್ತರು, ಹಿತೈಷಿಗಳು, ಪ್ರತಿಷ್ಠಾನದ ಸಾಮಾನ್ಯ ಸದಸ್ಯರುಗಳು ಹಾಗೂ ಕನ್ನಡಾಭಿಮಾನಿಗಳು ತಮ್ಮ ಸೂಕ್ತ ಸಲಹೆಗಳನ್ನು ನೀಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

■ ಎಸ್.ವಿ. ಶ್ರೀನಿವಾಸರಾವ್
ಸಂಪಾದಕರು



ವೆಂಕಟರಾಮಯ್ಯ ರವರ 'ಕನ್ನಡನೆಲ-ಕಾಸರಗೋಡು ಜನರ ಬವಣೆ', ಶ್ರೀಮತಿ ವೀಣಾ ಕುಲಕರ್ಣಿ ಅವರ 'ಬೇಂದ್ರೆ -ಕಾಳಿದಾಸ ಕಾವ್ಯಕಾರಣ' ಕೃತಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಸಾವಿತ್ರಮ್ಮ ದತ್ತಿ, ಶಾರದಮ್ಮ ಜಿ. ಹನುಮಯ್ಯ ದತ್ತಿ, ಅನಂತರಂಗ ದತ್ತಿ ಸ್ಪರ್ಧೆಗಳ ತೀರ್ಪುಗಾರರುಗಳಾದ ಪ್ರೊ.ಕೆ.ಎಂ. ಸೀತಾರಾಮಯ್ಯ, ಡಾ. ಮುಳುಕುಂಟೆ ರಮೇಶ್, ಶ್ರೀಮತಿ ಪ್ರೇಮಾಭಟ್, ಡಾ. ಎಸ್.ವಿ. ಪ್ರಭಾವತಿ, ಶ್ರೀ ಎನ್. ಮಂಜುನಾಥ್, ಶ್ರೀ ಹೆಚ್.ವಿ. ರವೀಶ್, ಡಾ. ಶ್ಯಾಮಲಾರತ್ನಾಕುಮಾರಿ, ಪ್ರೊ.ಕೆ.ಎಸ್. ಮಧುಸೂದನ, ಡಾ. ವಿಜಯಾ ಸುಬ್ಬರಾಜ್ ರವರುಗಳಿಗೆ ಪ್ರತಿಷ್ಠಾನದ ಪರವಾಗಿ ಹೂಗುಚ್ಛ ನೀಡಿ ಮೆಚ್ಚುಗೆ ಸೂಚಿಸಿದ ನಾಡೋಜ ಜಿ. ನಾರಾಯಣ ಹಾಗೂ ಪ್ರೊ. ದೊರೆಸ್ವಾಮಿ ತೀರ್ಪುಗಾರರ ಸ್ತುತ್ಯರ್ಹ ಕಾರ್ಯಕ್ಕೆ ವಂದನೆ ಸಲ್ಲಿಸಿದರು. ಸ್ಪರ್ಧೆಯ ಕೃತಿಗಳ ಬಗ್ಗೆ ಡಾ. ವಿಜಯಾ ಸುಬ್ಬರಾಜ್, ಶ್ರೀಮತಿ ಪ್ರೇಮಾಭಟ್, ಡಾ. ಎಸ್.ವಿ. ಪ್ರಭಾವತಿ ಅವರು ಬೆಳಕು ಚೆಲ್ಲಿದರು. ಪ್ರಶಸ್ತಿ ವಿಜೇತರ ಪರವಾಗಿ ಶ್ರೀ ಎಂ.ಎಸ್. ವೆಂಕಟರಾಮಯ್ಯ ಮಾತನಾಡಿ ಪ್ರತಿಷ್ಠಾನಕ್ಕೆ ಹಾಗೂ ತೀರ್ಪುಗಾರರಿಗೆ ಕೃತಜ್ಞತೆ ಸಲ್ಲಿಸಿದರು. ಡಾ. ನಾ. ಗೀತಾಚಾರ್ಯ ಕಾರ್ಯಕ್ರಮ ನಿರ್ವಹಿಸಿ ಮಾತನಾಡುತ್ತಾ ಪ್ರತಿಷ್ಠಾನಕ್ಕೆ ಇರುವ ಆರ್ಥಿಕ ತೊಂದರೆಗಳನ್ನು ವಿವರಿಸಿದರು.

ಇದಕ್ಕೆ ಸ್ಪಂದಿಸಿದ ಸನ್ಮಾನ್ಯ ಪ್ರೊ. ಎಂ.ಆರ್. ದೊರೆಸ್ವಾಮಿ ಪ್ರತಿಷ್ಠಾನದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಐದು ಲಕ್ಷ ರೂಪಾಯಿಗಳ ಅನುದಾನವನ್ನು ಶಾಸಕರ ನಿಧಿಯಿಂದ ನೀಡುವುದಾಗಿ ಘೋಷಿಸಿದರು. ಇದಕ್ಕೆ ಅತಿಥಿಗಳು ಹಾಗೂ ಪ್ರೇಕ್ಷಕರು ಕರತಾಡತನದ ಮೂಲಕ ಮೆಚ್ಚುಗೆ ವ್ಯಕ್ತಿಪಡಿಸಿದರು. ❒

'ಶ್ರೀಉತ್ಸವ', ಬಿ.ಎಂ.ಶ್ರೀ ಪ್ರತಿಮೆಗೆ ಮಾಲಾರ್ಪಣೆ-ಅಂತರಜಾಲತಾಣ (ವೆಬ್‌ಸೈಟ್) ಉದ್ಘಾಟನೆ.........

(೧ನೇ ಪುಟದಿಂದ)

ಹರ್ಷ ವ್ಯಕ್ತಪಡಿಸಿದರು. ಈ ಸ್ತುತ್ಯರ್ಹ ಯೋಜನೆಯ ಕಾರಣಕರ್ತರಾದ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರು ಮತ್ತು ಪದಾಧಿಕಾರಿ ವರ್ಗ ಹಾಗೂ ಈ ಕಾರ್ಯವನ್ನು ಆಗುಮಾಡಿಸಿದ ಗಣಕ ಪರಿಷತ್ತಿನ ಶ್ರೀ ಜಿ.ಎನ್. ನರಸಿಂಹಮೂರ್ತಿ ಅವರುಗಳನ್ನು ಅಭಿನಂದಿಸಿದರು. ಶ್ರೀ ಜಿ.ಎನ್. ನರಸಿಂಹಮೂರ್ತಿ ಅವರು ವೆಬ್‌ಸೈಟಿನಲ್ಲಿ ಅಳವಡಿಸಿರುವ ಮಾಹಿತಿಯನ್ನು ಕಂಪ್ಯೂಟರ್‌ನಲ್ಲಿ ಪ್ರದರ್ಶಿಸಿದರು.

ಈ ಕಾರ್‍ಯಕ್ರಮದ ಪ್ರಾರಂಭದಲ್ಲಿ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಒಂದನೆ ಮಹಡಿಯ ಮೇಲೆ ಪ್ರತಿಷ್ಠಾಪಿಸಿರುವ ಬಿ.ಎಂ.ಶ್ರೀ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಮುಖ್ಯ ಅತಿಥಿಗಳಾಗಿ ಪ್ರೊ. ಎಲ್.ಎಸ್. ಶೇಷಗಿರಿರಾವ್, ಡಾ. ದೊಡ್ಡರಂಗೇಗೌಡ ಎಂ.ಎಲ್.ಸಿ, ಉಪಸ್ಥಿತರಿದ್ದರು. ನಾಡೋಜ ಜಿ. ನಾರಾಯಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಅವರು ಸದಸ್ಯರನ್ನು ಸ್ವಾಗತಿಸಿದರು.

ಪ್ರೊ. ಎಲ್.ಎಸ್. ಶೇಷಗಿರಿರಾವ್ ತಮ್ಮ ಗುರು ಬಿ.ಎಂ.ಶ್ರೀ ಅವರ ಸಾಹಿತ್ಯ ರಚನೆಯ ಹಿರಿಮೆ ಗರಿಮೆಯನ್ನು ಸ್ತುತಿಸಿ ಹೊಸ ಸಾಹಿತ್ಯ ಸೃಷ್ಟಿಗೆ ಹೇಗೆ ಅಧ್ವರ್ಯುವಾದರು ಎಂಬುದನ್ನು ಬಣ್ಣಿಸಿದರು. ಗುರುಶಿಷ್ಯ ಸಂಬಂಧದ ಮೇಲೂ ಬೆಳಕು ಚೆಲ್ಲಿದರು.

ವ್ಯವಸ್ಥಾಪಕ ಕಾರ್‍ಯದರ್ಶಿ ಶ್ರೀ ಎಸ್. ವಿ. ಶ್ರೀನಿವಾಸರಾವ್ ವಂದನಾರ್ಪಣೆ ಮಾಡಿದರು. ಗೌ॥ ಕಾರ್‍ಯದರ್ಶಿ ಡಾ.ನಾ. ಗೀತಾಚಾರ್ಯ ಸಭಾಕಾರ್ಯವನ್ನು ನಿರ್ವಹಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ ವಿದುಷಿ ಶ್ರೀಮತಿ ವಸುಪ್ರದ ನಾಗೇಂದ್ರ ಮತ್ತು ಸಂಗಡಿಗರಿಂದ ನಡೆದ 'ಶ್ರೀ' ಗೀತಗಾಯನ ಕಾರ್ಯಕ್ರಮ ಎಲ್ಲರನ್ನು ರಂಜಿಸಿತು. ಕಣಕಟ್ಟೆ ಕೃಷ್ಣಮೂರ್ತಿ ಸ್ಮಾರಕ ದತ್ತಿ ಅಂಗವಾಗಿ ಈ ಕಾರ್‍ಯಕ್ರಮವನ್ನು ಆಯೋಜಿಸಲಾಗಿತ್ತು. ದತ್ತಿ ದಾನಿಗಳಾದ ಡಾ. ಕೆ. ಶ್ರೀಕಂಠಯ್ಯ ಅವರ ಬಂಧುಗಳೂ ಉಪಸ್ಥಿತರಿದ್ದರು. ❒

............ದಾನಗಳು...........

ಎಂ.ವಿ.ಸೀ. ಶತಮಾನೋತ್ಸವ ನಿಧಿ

೧) ಶ್ರೀ ಎಂ.ಎಸ್. ರಾಮಪ್ರಸಾದ್, ಬೆಂಗಳೂರು	೧೧,೦೦೧-೦೦
೨) ಡಾ॥ ದೇವರಕೊಂಡರೆಡ್ಡಿ, ಹಂಪಿ	೫,೦೦೦-೦೦
೩) ವಿಮಾನ ಕನ್ನಡ ಸಂಘ,ಬೆಂಗಳೂರು	೧,೦೦೦-೦೦
೪) ಕರ್ನಾಟಕ ಸಾಂಸ್ಕೃತಿಕ ವೇದಿಕೆ, ಬೆಂಗಳೂರು	೧,೦೦೦-೦೦
೫) ಅಖಿಲ ಕರ್ನಾಟಕ ಮಕ್ಕಳ ಸಾಹಿತ್ಯ ಪರಿಷತ್ತು, ಬೆಂಗಳೂರು	೮೨೫-೦೦
೬) ಡಾ.ನಾ. ಗೀತಾಚಾರ್ಯ, ಬೆಂಗಳೂರು	೮೦೦-೦೦
೭) ಪ್ರೊ. ಎಲ್.ಎಸ್. ಶೇಷಗಿರಿರಾವ್, ಬೆಂಗಳೂರು	೭೦೦-೦೦
೮) ಪ್ರೊ. ಅ.ರಾ.ಮಿತ್ರ, ಬೆಂಗಳೂರು	೨೦೦-೦೦
೯) ಶ್ರೀ ಎಸ್.ಟಿ.ರಾಧಾಕೃಷ್ಣ, ಬೆಂಗಳೂರು	೨೦೦-೦೦

ಅನುದಾನ

೧) ಕನ್ನಡ ಮತ್ತು ಸಂಸ್ಕೃತಿ ಇಲಾಖೆ	೨,೦೦,೦೦೦-೦೦
೨) ಕನ್ನಡ ಮತ್ತು ಸಂಸ್ಕೃತಿ ಇಲಾಖೆ	೫,೦೦,೦೦೦-೦೦
೩) ಕನ್ನಡ ಅಭಿವೃದ್ಧಿ ಪ್ರಾಧಿಕಾರ	೫,೦೦,೦೦೦-೦೦

ಹಸ್ತಪ್ರತಿ ದಾನ ಶ್ರೀಮತಿ ಪ್ರಭಾಮೂರ್ತಿ ೨ (ಎರಡು ಹಸ್ತಪ್ರತಿಗಳು)

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು
ಎಂ.ಫಿಲ್ ೨೦೦೮-೦೯ನೇ ಸಾಲಿನ ಪದವಿ ಪಡೆದಿರುವವರು

ಕ್ರ.ಸಂ	ಹೆಸರು	ಅಂಕಗಳು ೫೦೦ಕ್ಕೆ	ದರ್ಜೆ	ನಿಬಂಧದ ವಿಷಯ	ಮಾರ್ಗದರ್ಶಕರು
೧.	ಸೌಮ್ಯ ಎಸ್.	೩೭೪	ಪ್ರಥಮ ೭೪.೮%	'ವಾಗೀಶ್ವರಿ ಶಾಸ್ತ್ರಿಯವರ ಸಂಪ್ರದಾಯದ ಹಾಡುಗಳು'	ಪ್ರೊ. ಡಿ. ಲಿಂಗಯ್ಯ
೨.	ಉಮ್ಮೇಸಲ್ಮ	೩೭೮	ಉನ್ನತ ಶ್ರೇಣಿ ೭೫.೬%	'ಕನ್ನಡ ಕಾವ್ಯಮೀಮಾಂಸೆಗೆ ಡಾ. ಪು.ತಿ.ನ ಅವರ ಕೊಡುಗೆ'	ಪ್ರೊ.ಕೆ.ಎಸ್. ಮಧುಸೂದನ
೩.	ವೀಣಾಕುಮಾರ್	೩೬೯	ಪ್ರಥಮ ೭೩.೮%	'ಗಾಂಧಿ ಬಂದ' ಕಾದಂಬರಿಯ ಒಂದು ಸಾಂಸ್ಕೃತಿಕ ಅಧ್ಯಯನ	ಡಾ. ವಿಜಯಾ ಸುಬ್ಬರಾಜ್
೪.	ಕೃಷ್ಣಮೂರ್ತಿ ಎಂ.ಸಿ.	೩೬೯	ಪ್ರಥಮ ೭೩.೮%	'ಏಕಲವ್ಯನನ್ನು ಕುರಿತ ನಾಲ್ಕು ಪ್ರಮುಖ ನಾಟಕಗಳು ಒಂದು ಅಧ್ಯಯನ(ಹೆಬ್ಬೆರಳ್, ಬೆರಳ್‌ಗೆಕೊರಳ್, ಏಕಲವ್ಯ ಮತ್ತೊಬ್ಬ ಏಕಲವ್ಯ)	ಡಾ.ಪಿ.ವಿ. ನಾರಾಯಣ
೫.	ಸುಜಾತ ಎ.	೩೬೧	ಪ್ರಥಮ ೭೨.೨%	'ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಕಥೆಗಳಲ್ಲಿ ಹಾಸ್ಯ ಪ್ರಜ್ಞೆ'	ಪ್ರೊ. ಡಿ. ಲಿಂಗಯ್ಯ
೬.	ಮುನಿರಾಜ .ಪಿ.	೩೮೦	ಉನ್ನತ ಶ್ರೇಣಿ ೭೬%	'ಬೇಗೂರು ಒಂದು ಸಾಂಸ್ಕೃತಿಕ ಅಧ್ಯಯನ'	ಪ್ರೊ. ಕೆ.ಎಸ್.ಮಧುಸೂದನ
೭.	ಸೈಯದ್ ಮುಯಿನ್	೩೮೧	ಉನ್ನತ ಶ್ರೇಣಿ ೭೬.೨%	'ದಾಸಸಾಹಿತ್ಯದಲ್ಲಿ ರಾಮಾಯಣ ಪ್ರಸಂಗಗಳು ಒಂದು ಸಮೀಕ್ಷೆ'	ಪ್ರೊ. ಜಿ. ಅಶ್ವತ್ಥನಾರಾಯಣ
೮.	ಸಂಧ್ಯ ವಿ.	೩೭೪	ಪ್ರಥಮ ೭೪.೮%	'ಕುಮಾರವ್ಯಾಸನ ವಿರಾಟಪರ್ವದ ವಿವಿಧ ಆವೃತ್ತಿಗಳು: ಒಂದು ಅಧ್ಯಯನ	ಪ್ರೊ. ಜಿ. ಅಶ್ವತ್ಥನಾರಾಯಣ

ಮೂರು ಜನ ವಿದ್ಯಾರ್ಥಿಗಳು **ಉನ್ನತ ಶ್ರೇಣಿಯಲ್ಲಿ** ಮತ್ತು ಉಳಿದ ವಿದ್ಯಾರ್ಥಿಗಳು **ಪ್ರಥಮ ದರ್ಜೆಯಲ್ಲಿ** ತೇರ್ಗಡೆ ಹೊಂದಿದ್ದಾರೆ. ನಮ್ಮ ಕೇಂದ್ರದಿಂದ ಸೈಯದ್ ಮುಯಿನ್ ಅತಿ ಹೆಚ್ಚಿನ ಅಂಕ ಗಳಿಸಿ ಶೇ. ೭೬.೨ರಷ್ಟು ಫಲಿತಾಂಶ ಗಳಿಸಿದ್ದಾರೆ.

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಮೇಲ್ಕಂಡವರಿಗೆ ಹಾರ್ದಿಕ ಅಭಿನಂದನೆ ಸಲ್ಲಿಸುತ್ತಿದೆ.

ಡಾ॥ ವಿಜಯಾ ಸುಬ್ಬರಾಜ್
ನಿರ್ದೇಶಕರು,
ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು
ಪಿಎಚ್.ಡಿ ೨೦೦೯-೧೦ನೇ ಸಾಲಿನಲ್ಲಿ ಪದವಿ ಪಡೆದಿರುವವರು

ಕ್ರ.ಸಂ.	ಹೆಸರು	ನಿಬಂಧ ಶೀರ್ಷಿಕೆ	ಮಾರ್ಗದರ್ಶಕರು	ವರ್ಷ	ಫಲಿತಾಂಶ
೧.	ಡಾ. ಸುರೇಶ್ ನಾಗಲಮಡಿಕೆ	'ಕನಕದಾಸ'-ಒಂದು ಸಾಂಸ್ಕೃತಿಕ ಅಧ್ಯಯನ	ಡಾ.ಅನಂತಪದ್ಮನಾಭರಾವ್	೨೦೧೦	ಅತ್ಯುತ್ತಮ
೨.	ಡಾ. ನಾಗರಾಜ ಹೊಸೂರಕರ್	'ಮೈಲಾರಲಿಂಗನ ಆಚರಣೆ – ಒಂದು ಸಾಂಸ್ಕೃತಿಕ ಅಧ್ಯಯನ	ಪ್ರೊ. ಡಿ. ಲಿಂಗಯ್ಯ	೨೦೧೦	ಅತ್ಯುತ್ತಮ
೩.	ಡಾ. ಶಾಂತಕುಮಾರಿ ಸಿ.ಎಂ.	'ಟಿ.ಎನ್. ಮಹದೇವಯ್ಯನವರ ಬದುಕು-ಬರಹ ಒಂದು ಅಧ್ಯಯನ	ಪ್ರೊ. ಎನ್. ಬಸವಾರಾಧ್ಯ	೨೦೧೦	ಉತ್ತಮ
೪.	ಡಾ. ರೇಣುಕಾಪ್ರಸಾದ್ ಪಿ.ಆರ್.	೨೦ನೇ ಶತಮಾನದ ಕನ್ನಡ ಚಿಂತನೆಯಲ್ಲಿ ಸಂಸ್ಕೃತಿಯ ವ್ಯಾಖ್ಯಾನಗಳ – ತುಲನಾತ್ಮಕ ಅಧ್ಯಯನ	ಡಾ. ಕೆ.ವಿ. ರಮೇಶ್	೨೦೧೦	ಅತ್ಯುತ್ತಮ
೫.	ಡಾ. ರಮಾನಂದ ಕೆ.ವಿ	ಹರಿದಾಸ ಸಾಹಿತ್ಯಕ್ಕೆ ಮಾಧ್ವಯತಿಗಳ ಕೊಡುಗೆ	ಡಾ.ಅನಂತಪದ್ಮನಾಭರಾವ್	೨೦೧೦	ಉತ್ತಮ
೬.	ಡಾ. ಹಾಲಪ್ಪ ಎಂ.	ಚಿತ್ರದುರ್ಗ ಜಿಲ್ಲೆಯ ಜಾನಪದ ವೈದ್ಯ – ಒಂದು ಅಧ್ಯಯನ	ಡಾ. ಎಂ.ಎಲ್. ಲಲಿತಮ್ಮ	೨೦೧೦	ಅತ್ಯುತ್ತಮ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಮೇಲ್ಕಂಡವರಿಗೆ ಹಾರ್ದಿಕ ಅಭಿನಂದನೆ ಸಲ್ಲಿಸುತ್ತಿದೆ.

ಮಂಗಳೂರಿನ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಎಂ.ವಿ.ಸೀ. ಶತಮಾನೋತ್ಸವ



ಫೆಬ್ರವರಿ ೫, ೨೦೧೦ ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ ಡಾ. ಪಿ.ವಿ. ನಾರಾಯಣ ಪ್ರಾಸ್ತಾವಿಕ ಭಾಷಣ ಮಾಡಿದರು. ಎಂ.ವಿ.ಸೀ. ಅವರನ್ನು ಕುರಿತು ಡಾ. ಜಿ.ಬಿ. ಹರೀಶ್ ಉಪನ್ಯಾಸ ನೀಡಿದರು. ಹಸ್ತಪ್ರತಿ ಸಂರಕ್ಷಣೆ ಕುರಿತು ಡಾ. ನಾ. ಗೀತಾಚಾರ್ಯ ಮಾತನಾಡಿದರು. ಕಾಲೇಜಿನ ಕನ್ನಡ ವಿಭಾಗದ ಡಾ. ಸಬಿಹಾ ಅಧ್ಯಕ್ಷತೆ ವಹಿಸಿದ್ದರು.

೦೬-೦೨-೨೦೧೦ ರಾಷ್ಟ್ರಕವಿ ಗೋವಿಂದಪೈ ಸಂಶೋಧನಾ ಕೇಂದ್ರ, ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ

ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್ ಮಣಿಪಾಲ ಸಂಸ್ಥೆಗಳು ಎಂ.ವಿ.ಸೀ ಶತಮಾನೋತ್ಸವ ಕಾರ್ಯಕ್ರಮವನ್ನು ಆಯೋಜಿಸಿದ್ದವು.

ಡಾ. ಪಿ.ವಿ. ನಾರಾಯಣ ಕಾರ್ಯಕ್ರಮ ಉದ್ಘಾಟಿಸಿ ಆಶಯಭಾಷಣ ಮಾಡಿದರು ಡಾ. ತಾಳ್ತಜೆ ವಸಂತಕುಮಾರ್: ನಿವೃತ್ತ ಪ್ರಾಧ್ಯಾಪಕರು, ಮುಂಬೈ ವಿಶ್ವವಿದ್ಯಾನಿಲಯ, ಅವರು ಅಧ್ಯಕ್ಷತೆ ವಹಿಸಿದ್ದರು. ಡಾ. ಜಿ.ಬಿ.ಹರೀಶ್ 'ಎಂ.ವಿ.ಸೀ ಬದುಕು-ಬರಹ' ಕುರಿತು, ಡಾ. ನಾ. ಗೀತಾಚಾರ್ಯ 'ಪ್ರಾಚೀನ ಹಸ್ತಪ್ರತಿಗಳ' ಕುರಿತು ಉಪನ್ಯಾಸ ನೀಡಿದರು. ಎಂ.ಜಿ.ಎಂ. ಕಾಲೇಜಿನ ಪ್ರಾಂಶುಪಾಲ ಡಾ. ಪಿ.ವೆಂಕಟರಮಣಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಡಾ. ರಾಮದಾಸ ಎಂ.ಪೈ, ರಿಜಿಸ್ಟ್ರಾರ್ ಅಕಾಡೆಮಿ ಆಫ್ ಜನರಲ್ ಎಜ್ಯುಕೇಶನ್, ಶ್ರೀ ಹೆರಜೆ ಕೃಷ್ಣಭಟ್ಟ ನಿರ್ದೇಶಕರು, ಗೋವಿಂದಪೈ ಸಂಶೋಧನಾ ಕೇಂದ್ರ ಇವರುಗಳು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಫೆಬ್ರವರಿ ೮ ಮತ್ತು ೯, ೨೦೧೦ 'ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ'

ಜೂನಿಯರ್ ಕಾಲೇಜಿನ ಮೈದಾನದಲ್ಲಿ ನಡೆದ ಕಾರ್ಯಕ್ರಮಗಳ ಅಂಗವಾಗಿ ಬಿ.ಎಂ.ಶ್ರೀ ಪ್ರತಿಷ್ಠಾನದ ಹಸ್ತಪ್ರತಿ ಪ್ರದರ್ಶನ ಹಾಗೂ ಪ್ರೊ. ಎಂ.ವಿ.ಸೀ. ಜನ್ಮಶತಮಾನೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಹಸ್ತಪ್ರತಿ ಪ್ರದರ್ಶನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರೈಲ್ವೆ ಸಚಿವ ಶ್ರೀ ಕೆ.ಎಚ್. ಮುನಿಯಪ್ಪ; ವಿಧಾನಸಭಾ ಸದಸ್ಯ ಶ್ರೀ ಎಸ್.ಎನ್. ಕೃಷ್ಣಯ್ಯ ಶೆಟ್ಟಿ-ವಿಧಾನಪರಿಷತ್ ಸದಸ್ಯ ಶ್ರೀ ವಿ.ಆರ್. ಸುದರ್ಶನ್, ಶ್ರೀ ನಸೀರ್ ಅಹಮದ್, ಶ್ರೀ ವೈ.ವಿ. ನಾರಾಯಣಸ್ವಾಮಿ, ಜಿಲ್ಲಾ ಪಂಚಾಯಿತಿ ಸದಸ್ಯೆ ಶ್ರೀಮತಿ ನವೀದಾಖಾನಂ ಮುಂತಾದವರು ಉಪಸ್ಥಿತರಿದ್ದರು. ಜನ್ಮ ಶತಾಬ್ದಿ ಕಾರ್ಯಕ್ರಮದಲ್ಲಿ ಡಾ. ನಾ. ಗೀತಾಚಾರ್ಯ ಎಂ.ವಿ.ಸೀ ಕುರಿತು ಉಪನ್ಯಾಸ ಮಾಡಿದರು. ಹಾಗೂ ಹಸ್ತಪ್ರತಿ ಸಂಗ್ರಹಣ, ಸಂರಕ್ಷಣೆ ಬಗ್ಗೆ ಮಾಹಿತಿ ನೀಡಿದರು. ಶ್ರೀ ಎನ್. ವೆಂಕಟರಾವ್ ಸ್ವಾಗತಿಸಿದರು. ಶ್ರೀ ಟಿ.ಎಸ್. ರಮೇಶ್ ವಂದನಾರ್ಪಣೆ ಮಾಡಿದರು.

೨೬-೦೨-೨೦೧೦ ಶುಕ್ರವಾರ ಬೆಂಗಳೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು

ರಾಜಕೀಯ ಶಿಕ್ಷಣ ತರಬೇತಿ ಮತ್ತು ಸಂಶೋಧನಾ ಸಂಸ್ಥೆ ಸಹಕಾರದೊಡನೆ ನಡೆಸಿದ ೫೪ನೇ ಚುಟುಕು ಕಾರ್ಯಕ್ರಮದಡಿ ಎಂ.ವಿ.ಸೀ ಸಂಸ್ಮರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದವು. ಶ್ರೀ ಎಚ್.ಎಸ್. ರೇಣುಕಾಪ್ರಸಾದ್ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ನಾ. ಗೀತಾಚಾರ್ಯ ಎಂ.ವಿ.ಸೀ ಬದುಕು ಬರಹದ ಮೇಲೆ ಉಪನ್ಯಾಸ ನೀಡಿದರು. ಬೆಂಗಳೂರು ಸಾಹಿತ್ಯ ಕೂಟದ ಉಪಾಧ್ಯಕ್ಷ ಶ್ರೀ ರಮೇಶ್‌ಬಾಬು ಉಪಸ್ಥಿತರಿದ್ದರು. ರಾಜಕೀಯ ಶಿಕ್ಷಣ ತರಬೇತಿ ಮತ್ತು ಸಂಶೋಧನಾ ಸಂಸ್ಥೆಯ ಶ್ರೀ ಜಿ.ಬಿ. ರಾಜು,.ಚುಟುಕು ಸಾಹಿತ್ಯ ಪರಿಷತ್ತಿನ - ಟಿ. ನಾರಾಯಣಸ್ವಾಮಿ, ಮಧು ಬಿಲ್ಲಿನಕೋಟೆ ಕಾರ್ಯಕ್ರಮನಿರ್ವಹಿಸಿದರು.

೦೫-೦೩-೨೦೧೦ ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ ಪ್ರಥಮ ದರ್ಜೆ ಮಹಿಳಾ ಕಾಲೇಜು

ಕನ್ನಡ ಸಂಘ 'ಅನನ್ಯ' ಎಂ.ವಿ.ಸೀ ಪ್ರತಿಷ್ಠಾನದ ಸಂಯುಕ್ತಾಶ್ರಯ ದಲ್ಲಿ 'ಎಂ.ವಿ.ಸೀ ರವರ ಬದುಕು-ಬರಹ' ಉಪನ್ಯಾಸಮಾಲೆ ಏರ್ಪಡಿಸಿತ್ತು. ಡಾ. ಪಿ.ವಿ. ನಾರಾಯಣ ಉದ್ಘಾಟಿಸಿದರು. ಡಾ. ವಿಜಯಾಸುಬ್ಬರಾಜ್ ಎಂ.ವಿ.ಸೀ. ಬಗ್ಗೆ ಉಪನ್ಯಾಸ ನೀಡಿದರು.

೧೯-೦೩-೨೦೧೦ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕೊಂಗಾಡಿಯಪ್ಪ ಕಾಲೇಜು

ದೊಡ್ಡಬಳ್ಳಾಪುರ, ಬಿ.ಎಂ.ಶ್ರೀ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಎಂ.ವಿ.ಸೀ.ಶತಮಾನೋತ್ಸವ ಮತ್ತು ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಏರ್ಪಡಿಸಿತ್ತು. ಡಾ. ಪಿ.ವಿ. ನಾರಾಯಣ ಉದ್ಘಾಟಿಸಿದರು. ಕೊಂಗಾಡಿಯಪ್ಪ ಕಾಲೇಜಿನ ಪ್ರಾಂಶುಪಾಲ ಶ್ರೀ ಎಸ್.ವಿ. ಸುಬ್ರಹ್ಮಣ್ಯ ಅಧ್ಯಕ್ಷತೆ ವಹಿಸಿದ್ದರು. ಡಾ. ನಾ. ಗೀತಾಚಾರ್ಯ ಹಸ್ತಪ್ರತಿ ಸಂಗ್ರಹಣೆ, ಸಂರಕ್ಷಣೆಗೆ ಉಪನ್ಯಾಸ ನೀಡಿದರು. ಅಂದು ಸಂಜೆ ಗಮಕ ಕಲಾ ಪರಿಷತ್ತು ಬೆಂಗಳೂರು(ರಿ), ಬೆಂಗಳೂರು ಜಿಲ್ಲಾ ಗಮಕ ವಾಚನ ಕಾರ್ಯಕ್ರಮ ಏರ್ಪಡಿಸಿತ್ತು. ಡಾ. ಪಿ.ವಿ. ನಾರಾಯಣ ಅಧ್ಯಕ್ಷತೆ ವಹಿಸಿದ್ದರು.

. ಸ್ಮಾರಕ ಪ್ರತಿಷ್ಠಾನದ ಕಾರ್ಯಕ್ರಮಗಳ ಬಗ್ಗೆ ಬಂದಿರುವ ಪತ್ರಿಕಾ ವರದಿ

ಪ್ರತಿಷ್ಠಾನದ ಹೊರಗೆ ನಡೆದಿರುವ ಎಂ.ವಿ.ಸೀ. ಶತಮಾನೋತ್ಸವ ಕಾರ್ಯಕ್ರಮಗಳು

'ವ್ಯಾಮೋಹದ ಜಾಡ್ಯದಲ್ಲಿ ನಾವು ಬಂದಿಗಳು'

ಳಂಗಡಿ, ಫೆ. ೫: ಕನ್ನಡದ ಹಿಂದಿನ ಹಿರಿಯ ಕವಿಗಳಿಗೆ ಆಂಗ್ಲ ೀಹ ಜಾಸ್ತಿ. ಅದಕ್ಕೆ ಬ್ರಿಟಿಷ್ ಆಡಳಿತ ಕಾರಣ. ಕೆಲವರು ಅದನ್ನು ಕನ್ನಡದ ಸೆಳೆತಕ್ಕೆ ಒಳಗಾದರು. ಈಗಿನ ಯುವಕರಿಗೆ ಇಂಗ್ಲಿಷ್ ೀಹ ಬರಲು ಅಮೆರಿಕಾ ರಿಮೋಟ್ ಕಾರಣ. ನಾವೆಲ್ಲರೂ ಒಂದಲ್ಲ ರೀತಿ ವ್ಯಾಮೋಹದ ಜಾಡ್ಯದಲ್ಲಿ ಸಿಲುಕಿಕೊಂಡಿದ್ದೇವೆ. ಹೀಗೆ ಕಾರ್ಯಕ್ರಮದಲ್ಲಿ 'ವ್ಯಾಮೋಹ'ದ ಅನಾವರಣ ಮಾಡಿದ್ದು ೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಅಧ್ಯಕ್ಷ ಡಾ॥ ಪಿ.ವಿ. ನಾರಾಯಣ

ುಕ್ರವಾರ ಉಜಿರೆ ಎಸ್‌ಡಿಎಂ ಕಾಲೇಜಿನಲ್ಲಿ ಡಾ॥ ಹಾಮಾನಾ ೋಧನಾ ಕೇಂದ್ರ, ಕನ್ನಡ ವಿಭಾಗ, ಎಸ್‌ಡಿಎಂ ಕಾಲೇಜು, ಬಿ.ಎಂ.ಶ್ರೀ. ನ ವತಿಯಿಂದ ಎಂ.ವಿ.ಸೀ ಶತಮಾನೋತ್ಸವ ಮತ್ತು ಪ್ರಾಚೀನ ಪ್ರದರ್ಶನ ಉದ್ಘಾಟಿಸಿ ಅವರು ಆಶಯಭಾಷಣ ಮಾಡಿದರು. ನ್ನಡದ ಜನತೆಗೆ ಸಮಸ್ತ ಜ್ಞಾನ ಕನ್ನಡದ ಮೂಲಕ ದೊರೆಯ ಎಂದು ಸಾಹಿತಿಗಳು ಪ್ರಯತ್ನಿಸಿದರು. ಇತರ ಭಾಷೆಯ ಜತೆ ಟೆ ನಡೆಸಲು ಕನ್ನಡಕ್ಕೆ ದಾರ್ಢ್ಯ ಬೇಕು, ಅಭಿಮಾನ ಬೇಕು. ಇತರ ಂತೆ ನಮ್ಮ ಭಾಷೆ ಆಗದು. ಇತರ ಭಾಷೆಗಳ ವ್ಯಾಮೋಹ ನಮ್ಮನ್ನು ಮೇ ಆವರಿಸಿಕೊಳ್ಳುವಂತೆ ಆಗಬಾರದು. ವ್ಯಾಮೋಹ ಸುತ್ತು ಬಾರದು. ನಮ್ಮತನ ಮರೆಯಬಾರದು. ಜ್ಞಾನ ಮುಕ್ತವಾಗಿ ಸಿಗಬೇಕು. ಜ್ಞಾನ ಹೊಸ ರೀತಿಯಲ್ಲಿ ದೊರೆಯಬೇಕು ಎಂದರು.

ಂಗಳೂರಿನ ಜ್ಞಾನ ಆಯೋಗದ ಡಾ॥ ಜಿ.ಬಿ. ಹರೀಶ್ ಅವರು .ಸೀ. ಬದುಕು ಬರಹ ಕುರಿತು, ಬೆಂಗಳೂರಿನ ಶೇಷಾದ್ರಿಪುರಂ ಜಿನ ಕನ್ನಡ ಉಪನ್ಯಾಸಕ ಡಾ॥ ನಾ. ಗೀತಾಚಾರ್ಯ ಅವರು ಎಂ.ವಿ.ಸೀ ಪ್ರಾಚೀನ ಹಸ್ತಪ್ರತಿಗಳು ಎಂಬ ಕುರಿತು ಉಪನ್ಯಾಸ ನೀಡಿದರು. ಸ್‌ಡಿಎಂ ಕಾಲೇಜಿನ ಪ್ರಾಚಾರ್ಯ ಡಾ. ಬಿ. ಯಶೋವರ್ಮ, ಾನಾ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಎಸ್.ಡಿ. ಶೆಟ್ಟಿ ತರಿದ್ದರು.

ಾಲೇಜಿನ ಕನ್ನಡ ವಿಭಾಗ ಮುಖ್ಯಸ್ಥ ಡಾ॥ ಬಿ.ಪಿ. ಸಂಪತ್ ಕುಮಾರ್ ಿ. ಉಪನ್ಯಾಸಕ ದಿವಾ ಕೊಕ್ಕಡ ಕಾರ್ಯಕ್ರಮ ನಿರ್ವಹಿಸಿದರು.

– ಉದಯವಾಣಿ

ಫೆಬ್ರವರಿ, ೦೫, ೨೦೧೦ ಸೆಮಿನಾರ್‌ಹಾಲ್, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ: ಡಾ. ಹಾಮಾನಾ ಸಂಶೋಧನಾ ಕೇಂದ್ರ ಮತ್ತು ಕನ್ನಡ ವಿಭಾಗ ಶ್ರೀ ಧ.ಮಂ. ಕಾಲೇಜು, ಉಜಿರೆ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸಹಯೋಗದಲ್ಲಿ ಎಂ.ವಿ.ಸೀ. ಶತಮಾನೋತ್ಸವ ಮತ್ತು ಪ್ರಾಚೀನ ಹಸ್ತಪ್ರತಿ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಿದ್ದವು. ಡಾ. ಪಿ.ವಿ. ನಾರಾಯಣ ಕಾರ್ಯಕ್ರಮ ಉದ್ಘಾಟಿಸಿ ಆಶಯ ಭಾಷಣ ನೀಡಿದರು, ಡಾ. ಜಿ.ಬಿ. ಹರೀಶ್ 'ಎಂ.ವಿ.ಸೀ. ಬದುಕು-ಬರಹ' ಕುರಿತು ಉಪನ್ಯಾಸ ನೀಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ. ಯಶೋವರ್ಮ ಮುಖ್ಯಅತಿಥಿಗಳಾಗಿದ್ದರು. ಕಾಲೇಜಿನ ಡಾ. ಬಿ.ಪಿ. ಸಂಪತ್ ಕುಮಾರ್, ಡಾ. ಎಸ್.ಡಿ. ಶೆಟ್ಟಿ ಸಮಾರಂಭದಲ್ಲಿ ಉಪಸ್ಥಿತರಿದ್ದು ಕ್ರಮವಾಗಿ ಸ್ವಾಗತ ಹಾಗೂ ವಂದನಾರ್ಪಣೆ ಕಾರ್ಯ ನಿರ್ವಹಿಸಿದರು.

೨೦-೦೨-೨೦೧೦ ಬೆಂಗಳೂರು ವಿಶ್ವವಿದ್ಯಾಲಯ, ಕಾಲೇಜು ಕನ್ನಡ ಅಧ್ಯಾಪಕರ ಒಕ್ಕೂಟ ಮತ್ತು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮ

'ಎಂ.ವಿ. ಸೀತಾರಾಮಯ್ಯ ಮತ್ತು ಎಸ್.ಆರ್. ಕಂಠಿ ಜನ್ಮ ಶತಮಾನೋತ್ಸವ ಹಾಗೂ ವಿಶ್ವವಿದ್ಯಾಲಯಗಳ ವಿಶ್ವಾಸಾರ್ಹತೆ' – ವಿಚಾರಗೋಷ್ಠಿ : ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕದ ಹೈಕೋರ್ಟ್ ನ್ಯಾಯಾಧೀಶ ಶ್ರೀ ಎಚ್.ಎನ್. ನಾಗಮೋಹನದಾಸ್ ದೀಪ ಬೆಳಗಿಸುವುದರ ಮೂಲಕ ನೆರವೇರಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಎನ್. ಪ್ರಭುದೇವ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರೊ. ಬರಗೂರು ರಾಮಚಂದ್ರಪ್ಪ, ಪ್ರೊ. ಎಲ್.ಎಸ್. ಶೇಷಗಿರಿರಾವ್ ಆಗಮಿಸಿದ್ದರು. ವೇದಿಕೆಯ ಮೇಲೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ ಡಾ.ಪಿ.ವಿ. ನಾರಾಯಣ, ಅಧ್ಯಾಪಕರ ಒಕ್ಕೂಟದ ಡಾ. ಕೆ. ಕೃಷ್ಣಪ್ಪ ಉಪಸ್ಥಿತರಿದ್ದರು. ಶ್ರೀ ಕೃಷ್ಣಪ್ಪ ಸರ್ವರನ್ನೂ ಸ್ವಾಗತಿಸಿದರು. ಡಾ. ನಾ. ಗೀತಾಚಾರ್ಯ ಕಾರ್ಯಕ್ರಮದ ನಿರೂಪಣೆ ಮಾಡಿದರು.

ಡಾ. ಪ್ರಭುದೇವ್ ಅವರು ಪ್ರತಿಷ್ಠಾನ ಸಂಗ್ರಹಿಸಿರುವ ಪ್ರಾಚೀನ ಹಸ್ತಪ್ರತಿಗಳ ಬಗ್ಗೆ ಮಾಹಿತಿ ಪಡೆದು ಈ ಎಲ್ಲಾ ಪ್ರಾಚೀನ ಹಸ್ತಪ್ರತಿಗಳನ್ನು ಡಿಜಿಟೈಸ್ ಮಾಡಲು ಪ್ರತಿಷ್ಠಾನ ಯೋಜನೆ ಸಲ್ಲಿಸಿದಲ್ಲಿ ಅದನ್ನು ವಿಶ್ವವಿದ್ಯಾಲಯದ ವತಿಯಿಂದ ಕೈಗೆತ್ತಿಗೊಳ್ಳುವ ಆಶ್ವಾಸನೆ ನೀಡಿದರು. ❑

ಶ್ರದ್ಧಾಂಜಲಿ

೩೦-೦೧-೨೦೧೦: ಪ್ರಜಾವಾಣಿಯ ಸಹಾಯಕ ಸಂಪಾದಕರಾಗಿದ್ದ, ಖ್ಯಾತ ನಾಟಕಕಾರ, ಕಥೆಗಾರ, ಡಾ. ಬಿ.ವಿ. ವೈಕುಂಠರಾಜು (೭೩) ನಿಧನರಾದರು. 'ತಹ ತಹ' ಆತ್ಮಕಥೆ. ನಾಟಕ ಅಕಾಡೆಮಿ (೧೯೯೫), ಪತ್ರಿಕಾ ಅಕಾಡೆಮಿ (೧೯೯೭)ಯ ಪ್ರಶಸ್ತಿಗಳಲ್ಲದೆ ವರ್ಧಮಾನ ಪ್ರಶಸ್ತಿ – ಪಿ.ಆರ್. ರಾಮಯ್ಯ ಪ್ರಶಸ್ತಿ ಸಹ ಲಭಿಸಿವೆ. ಬಹುಕಾಲ 'ವಾರಪತ್ರಿಕೆ', 'ರಾಜು ಪತ್ರಿಕೆ'ಗಳ ಸಂಪಾದಕರಾಗಿದ್ದ ಹೆಗ್ಗಳಿಕೆ ಇವರದು, 'ಕನ್ನಡ ರಂಗಭೂಮಿ'–ಡಿ–ಲಿಟ್ ಗಳಿಸಿದ ಕೃತಿ.

(೨) ೨೬-೦೧-೨೦೧೦ : ಲೇಖಕಿ ಟಿ.ಎಸ್. ರುಕ್ಮಾಯಿ(೮೨) ಅವರು ನಿಧನರಾದರು. ಮಿಸ್ ಸಂಪತ್ ಎಂಬ ಕಾವ್ಯ ನಾಮದಲ್ಲಿ ಸಾಹಿತ್ಯ ರಚಿಸುತ್ತಿದ್ದರು. ತೆಲುಗಿನಿಂದ ೭೦ಕ್ಕೂ ಹೆಚ್ಚು ಕೃತಿಗಳನ್ನು ಅನುವಾದಿಸಿರುತ್ತಾರೆ'.

ಮೇಲ್ಕಂಡ ಎಲ್ಲಾ ದಿವಂಗತರುಗಳಿಗೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಗೌರವಪೂರ್ವಕವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ ■

ಪುಸ್ತಕ ಪರಿಚಯ



ವಿಜಯಪಥ: (ಕವಿಗಳು ಮತ್ತು ಗೀತೆಗಳ ಸಂಕಲನ) ಲೇಖಕರು: ಡಾ. ಗೋವಿಂದರಾವ್ ಜಾಲಿಹಾಳ (ಜಾಗೋ). ಪ್ರಕಾಶಕರು : ಮಿಹಿರಪ್ರಕಾಶನ ೩/೫/೧ನೇ ಮಹಡಿ ೯ನೇ ಮುಖ್ಯರಸ್ತೆ, ಹನುಮಂತನಗರ ಬೆಂಗಳೂರು -೧೯ ಬೆಲೆ ೬೦/- ಪುಟಗಳು : ೧೯೦. ಪ್ರಕಟಣೆ : ೨೦೦೯. ಇದು ಹಿರಿಯ ಲೇಖಕರಾದ ಜಾಗೋರವರ ನಾಲ್ಕನೆಯ ಕವನ ಮತ್ತು ಗೇಯ ಕವಿತೆಗಳ ಸಂಕಲನ. ಲೇಖಕರೇ ಹೇಳಿರುವಂತೆ ಇವರಲ್ಲಿ ಕಾವ್ಯಾಭಿವ್ಯಕ್ತಿ ಹಾಗೂ ಸಂಗೀತಾಭಿವ್ಯಕ್ತಿ ಎರಡನ್ನೂ ಕಾಣಬಹುದು. ಈ ಸಂಕಲನದಲ್ಲಿ ಸುಮಾರು ೨೦ ಗೇಯ ಕವಿತೆಗಳಲ್ಲದೆ ೧೬ ಸಂಗೀತಗಾರರನ್ನು ಮೆಚ್ಚಿ ಬರೆದ ವ್ಯಕ್ತಿ ಚಿತ್ರದಂತಹ ಕವನಗಳಿವೆ, ಮತ್ತೆ ಕೆಲವು ಸಾಧನಪಥ, ಹಿಡಿದಿರುವ ಅಸಾಧಾರಣ ವ್ಯಕ್ತಿಗಳ ವಿಶಿಷ್ಟ ಕವನಗಳಾಗಿವೆ. ಮುನ್ನುಡಿ ಬರೆದಿರುವ ಖ್ಯಾತ ವಿಮರ್ಶಕ ಡಾ. ಸಿ.ಎನ್. ರಾಮಚಂದ್ರನ್ ರವರ ಮಾತಿನಲ್ಲೇ ಹೇಳುವುದಾದರೆ ' ಜಾಗೋ ಅವರು ಅಡಿಗರ ವಿರುದ್ಧ ತುದಿಯಲ್ಲಿ ನಿಲ್ಲುತ್ತಾರೆ. ಅವರ ಉದ್ದೇಶವೇ ಸಾಧಕರ 'ವಿಜಯಪಥ'ವನ್ನು ಗುರುತಿಸುವುದಾದ್ದರಿಂದ ತಮ್ಮ ಕಾವ್ಯ ನಾಯಕನ/ನಾಯಕಿಯರ ಸಾಧನೆಗಳನ್ನು ಕೊಂಡಾಡುವುದರಲ್ಲಿ ಅವರು ತೃಪ್ತರಾಗುತ್ತಾರೆ.......' ಹೀಗೆ ಇದೊಂದು ವಿಶಿಷ್ಟ ಮಾದರಿಯ ಆಕರ್ಷಕ ಕವನ/ಗೀತೆಗಳ, ಓದಿ ಸಂತೋಷ ಪಡುವ ಸಂಕಲನವಾಗಿದೆ.


'ಸಿಂಹ ಘರ್ಜನೆ' (ಕನ್ನಡ ಸೇನಾನಿ ಟಿ.ಎ. ನಾರಾಯಣ ಗೌಡರ ಹೋರಾಟದ ಬದುಕು-ನಡೆದು ಬಂದದಾರಿ) ಲೇಖಕರು: ಶ್ರೀ ನೇ. ಭ.ರಾಮಲಿಂಗಶೆಟ್ಟಿ, ಪ್ರಕಾಶಕರು ಗಂಗಾ ಪ್ರಕಾಶನ. ಕರ್ನಾಟಕ ರಕ್ಷಣಾವೇದಿಕೆ ೨೫ ಪ್ರವೀಣ್ ಮಹಡಿ, ೨ನೇ ಅಂತಸ್ತು ೫ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು - ೫೬೦೦೦೯. ಪುಟಗಳು ೨೦೦: ಬೆಲೆ: ೧೨೦/ - ಪ್ರಕಟಣೆ : ೨೦೦೯.




ಹುಟ್ಟು ಹೋರಾಟಗಾರರಾದ ನಾರಾಯಣ ಗೌಡರು ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷರು, ಈ ಕೃತಿಯ ಗ್ರಂಥಕರ್ತ ಶ್ರೀರಾಮಲಿಂಗಶೆಟ್ಟರು, ಹೋರಾಟಗಾರರಾಗಿ ಸೇರಿ, ತಮ್ಮ ನಾಯಕನನ್ನು ಹತ್ತಿರದಿಂದ ಬಲ್ಲವರಾಗಿದ್ದಾರೆ. ಆದ್ದರಿಂದಲೇ ಜೀವನ ಚಿತ್ರವನ್ನು ಬಹುಸಮರ್ಥವಾಗಿ ಚಿತ್ರಿಸಲು ಶಕ್ತರಾಗಿದ್ದಾರೆ. ಯಶಸ್ವಿ ಆಗಿದ್ದಾರೆ ಎಂದರೆ ಅತಿಶಯೋಕ್ತಿ ಆಗಲಾರದು.

ನಾರಾಯಣಗೌಡರ ಹೋರಾಟದ ಬದುಕನ್ನು ಪ್ರತಿಮಿಸುವ ಈ ವಿಶಿಷ್ಟ ಕೃತಿಗೆ 'ಸಿಂಹ ಘರ್ಜನೆ' ಹೆಸರು ಅತ್ಯಂತ ಔಚಿತ್ಯಪೂರ್ಣವಾಗಿದೆ. ರಕ್ತ ಚೆಲ್ಲಿಯಾದರೂ ಕಾವೇರಿಯನ್ನು ಉಳಿಸುತ್ತೇವೆ, ಕನ್ನಡದ ಕನ್ನಡಿಗರ ಉಳಿವಿಗಾಗಿ ರಕ್ತ ಚೆಲ್ಲುತ್ತೇವೆ. ಕಾಸರಗೋಡು ನಮ್ಮದು - ಎಂದೆಲ್ಲಾ ಘೋಷಿಸುತ್ತಾ ನಿತ್ಯ ಹೋರಾಟದ ದುರ್ಗಮಹಾದಿಯಲ್ಲಿ ನಡೆಯುತ್ತಿರುವ ಕನ್ನಡ ಚಳವಳಿಯ ಮಹಾದಂಡನಾಯಕ, ಕನ್ನಡಸೇನಾನಿ ನಾರಾಯಣಗೌಡರ ವೈಶಿಷ್ಟ್ಯಪೂರ್ಣ ಚಿತ್ರಣ ಈ ಕೃತಿಯಲ್ಲಿ ಬಹುಚೆನ್ನಾಗಿ ಚಿತ್ರಿತಗೊಂಡಿದೆ. ಈ ಕೃತಿ ಯುವಕರಿಗೆ ಮಾರ್ಗದರ್ಶನ ನೀಡುವುದಲ್ಲದೆ ಹೋರಾಟದ ಕಿಚ್ಚನ್ನೂ ಅವರಲ್ಲಿ ಉದ್ರೇಕಗೊಳಿಸುವಷ್ಟು ಶಕ್ತಿಶಾಲಿಯಾಗಿದೆ. ಈ ಗ್ರಂಥ ಕರ್ತ, ಶ್ರೀರಾಮಲಿಂಗಶೆಟ್ಟಿ ಅಭಿನಂದನಾರ್ಹರು.

'ಬರೆಹದಲ್ಲಿ ಬೇಂದ್ರೆಯವರ ಬದುಕು' (ಬದುಕು-ಬರಹ) ಲೇಖಕರು: ಡಾ. ಜಿ. ಕೃಷ್ಣಪ್ಪ .ಪ್ರಕಾಶಕರು : ಪ್ರಸಾರಾಂಗ ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್ ಧಾರವಾಡ, (ದ.ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್ ಗ್ರಂಥ ಮಾಲೆ ಮೂರು) ಪುಟಗಳು : ೧೫೮, ಬೆಲೆ : ರೂ. ೧೦೦/- ಪ್ರಕಟಣೆ: ೨೦೦೮.




ಆ ಮಹಾಕವಿ ಬೇಂದ್ರೆಯವರನ್ನು ಹತ್ತಿರದಿಂದ ಬಲ್ಲ **ಡಾ. ಜಿ. ಕೃಷ್ಣಪ್ಪ** ಅವರು ಬೇಂದ್ರೆಯವರ ಬದುಕನ್ನು ಗದ್ಯ ಹಾಗೂ ಕಾವ್ಯದ ಮೂಲಕ ಪುನರಚಿಸುವ ಪ್ರಯತ್ನ ಮಾಡಿದ್ದಾರೆ ಈ ಗ್ರಂಥದ ಬೆನ್ನುಡಿಯಲ್ಲಿ ಖ್ಯಾತವಿಮರ್ಶಕ ಡಾ. ಗಿರಡ್ಡಿ ಗೋವಿಂದರಾಜು ಅವರು ಹೇಳಿರುವ ಈ ಮಾತುಗಳು ಅರ್ಥಪೂರ್ಣವಾಗಿವೆ. 'ಅವರ ಬದುಕಿನ ಮಹತ್ವದ ಸಂದರ್ಭಗಳ ಸಹಾಯದಿಂದ ಅವರ ಕಾವ್ಯವನ್ನು ಅರ್ಥೈಸುವ ಪ್ರಯತ್ನವನ್ನು ಮಾಡಿದ್ದಾರೆ. ಈ ಇಮ್ಮುಖದ ಅಭ್ಯಾಸದಿಂದ ಬೇಂದ್ರೆಯವರ ಜೀವನ ಮತ್ತು ಕಾವ್ಯ ಎರಡೂ ಹೊಸ ಬೆಳಕಿನಲ್ಲಿ ಕಾಣಿಸಿಕೊಂಡಿದೆ. ಬೇಂದ್ರೆಯವರ ಅಭ್ಯಾಸಕ್ಕೆ ಇವರದು ವಿಶಿಷ್ಟ ಕೊಡುಗೆಯಾಗಿದೆ. ಕೌಟುಂಬಿಕ ಪರಿಸರ, ಧಾರವಾಡದ ಜನಪದ ಜೀವನ, ಕಾವ್ಯಲೀಲೆ ಮುಂತಾದ ವಿಭಾಗಗಳಲ್ಲಿ ಅವರ ಜೀವನದ ಮೌಲಿಕತೆ ಪ್ರತಿಮಿಸಿದೆ. ಇದೊಂದು ಸಂಗ್ರಹ ಯೋಗ್ಯ ಕೃತಿ.



'ಮಿನುಗು ಬೆಳಕು', (ಜಿ.ಕೆ. ರವೀಂದ್ರ ಕುಮಾರ್‌ರ ಕಾವ್ಯ ಕುರಿತಾದ ಚಿಂತನೆ) ಸಂಪಾದಕರು : ಶ್ರೀ ಎಂ. ಎಸ್. ವೆಂಕಟರಾಮಯ್ಯ ಪ್ರಕಾಶಕರು : ಬಿಜ್ ಬಜ್ ನಂ. ೨ ೧ನೇ ಅಡ್ಡರಸ್ತೆ, ಕಾಳಿದಾಸ ಲೇಔಟ್, ಶ್ರೀನಗರ, ಬೆಂಗಳೂರು - ೫೬೦ ೦೫೦, ಬೆಲೆ : ೧೨೦/- ಪುಟ: ೧೨+೧೨೮ ಪ್ರಕಟಣೆ : ೨೦೦೯.

ಇತ್ತೀಚಿನ ಯಶಸ್ವಿ ಕವಿಗಳಲ್ಲಿ ಶ್ರೀ ರವೀಂದ್ರಕುಮಾರ್ ಒಬ್ಬ ಪ್ರಮುಖರು. ಸ್ವಂತಿಕೆ ಅವರೆಲ್ಲಾ ಕೃತಿಗಳಲ್ಲಿ ಧ್ವನಿಸುತ್ತಿರುವುದನ್ನು ಓದುಗರಲ್ಲದೆ ವಿಮರ್ಶಕರೂ ಗುರ್ತಿಸಿದ್ದಾರೆ, ಮೆಚ್ಚಿದ್ದಾರೆ. 'ಆಲದೊಂದಿಗೆ ತೆಂಗು, ಕಂಗು, ತಾಳೆ,

ಳನ್ನು ಗುರುತಿಸುವ, ಸೂರ್ಯ ಚಂದ್ರರೊಂದಿಗೆ ಲಕ್ಷ ನಕ್ಷತ್ರಗಳ ು ಬೆಳಕನ್ನು ಹಿಡಿದಿಡಲು ಯತ್ನಿಸುವ ಕೃತಿಯ ಸಂಪಾದಕ ಪ್ರಕಾಶಕರಾದ ವೆಂಕಟರಾಮಯ್ಯನವರ ಪ್ರಯತ್ನವು ಹೀಗೆಯೇ ುವರಿಯಲಿ ಮತ್ತು ಅದರಲ್ಲಿ ಯಶಸ್ಸು ಪಡೆಯಲಿ ಎಂದು ರ್ವಕವಾಗಿ ಆಶಿಸೋಣ. ಶ್ರೀ ಸುಬ್ರಾಯ ಚೊಕ್ಕಾಡಿಯವರ ಯೊಡನೆ ನಾವೂ ಧ್ವನಿ ಗೂಡಿಸೋಣ.



ಳೆಸು-ಬಳಸು-ಉಳಿಸು: (೭ ನಾಟಕಗಳ ಸಂಕಲನ) ಲೇಖಕರು: . ಶ್ರೀನಿವಾಸರಾವ್, ಪ್ರಕಾಶಕರು: ಶರಣ್ಯ ಪಬ್ಲಿಷಿಂಗ್ ಹೌಸ್, , ೧ನೇ ಮುಖ್ಯರಸ್ತೆ, ಸಿದ್ಧಾರ್ಥ ಲೇಔಟ್, ಬಿ.ಎಸ್.ಕೆ ೩ನೇ ವಿವೇಕಾನಂದನಗರ, ಬೆಂಗಳೂರು - ೫೬೦ ೦೮೫. ಬೆಲೆ ೨/- ಪುಟಗಳು : ೧೬೪ ಪ್ರಕಟಣೆ : ೨೦೦೯.

ರಿಸರ ದಿನಾಚರಣೆಯ ಅಂಗವಾಗಿ ರಚಿತಗೊಂಡಿರುವ ವಿಶೇಷ ಟಕ 'ಬೆಳೆಸು-ಬಳಸು-ಉಳಿಸು'. ಇದರ ಜೊತೆಯಲ್ಲಿ ವಿಶೇಷ ಸಂದರ್ಭದಲ್ಲಿ ರಚಿತಗೊಂಡು ಆಕಾಶವಾಣಿಯಲ್ಲಿ ಪ್ರಸಾರಗೊಂಡಿರುವ ಆರು ನಾಟಕಗಳಿವೆ. ಇವುಗಳಲ್ಲಿ ಕೆಲವು ರಂಗದ ಮೇಲೂ ಪ್ರದರ್ಶನಗೊಂಡು ಜನಪ್ರಿಯವಾಗಿವೆ. ಈ ಗ್ರಂಥದ ಬಗ್ಗೆ ಬೆನ್ನುಡಿ ಬರೆದಿರುವ ಖ್ಯಾತ ಲೇಖಕಿ / ವಿಮರ್ಶಕಿ ಡಾ. ವಿಜಯಾರವರ ಮಾತು ಉಲ್ಲೇಖನೀಯ '.......ಇವುಗಳಲ್ಲಿ ಎದ್ದು ಕಾಣುವುದು ಅವರ ಸಾಮಾಜಿಕ ಕಳಕಳಿ, ವ್ಯಂಗ್ಯ, ತಮಾಷೆ, ಗಂಭೀರ ಹೀಗೆ ಎಲ್ಲ ಮಾರ್ಗಗಳನ್ನು ಉಳಿಸಿಕೊಂಡು ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ತಹತಹಿಸುವ ಮನಸ್ಸನ್ನಿಲ್ಲಿ ಕಾಣುತ್ತೇವೆ...... ಅವರ ಬರಹ ಸರಳ. ಆದರೆ ಮನನೀಯ............'

ವೈವಿಧ್ಯಪೂರ್ಣ ವಸ್ತುವನ್ನೊಳಗೊಂಡ ಈ ಕಿರುನಾಟಕಗಳು ಸರ್ವರಿಗೂ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ❒

ಅಭಿನಂದನೆಗಳು

ಅಂಬಿಕಾತನಯದತ್ತ ಪ್ರಶಸ್ತಿ (೨೦೦೯) : ಈ ರಾಷ್ಟ್ರೀಯ ಪ್ರಶಸ್ತಿಗೆ ಹಿರಿಯಕವಿ ಡಾ. ಚೆನ್ನವೀರಕಣವಿ ಭಾಜನರಾಗಿದ್ದಾರೆ.

ಪಾಲ್ಕೆ (ದಾದಾ ಸಾಹೇಬ್ ಪಾಲ್ಕೆ) ಪ್ರಶಸ್ತಿ: ಚಿತ್ರರಂಗದ ಅತ್ಯುನ್ನತ ಈ ಪಾಲ್ಕೆ ಪ್ರಶಸ್ತಿ ಸಿನಿಮಾ ಛಾಯಾಗ್ರಾಹಕ ಶ್ರೀ ವಿ.ಕೆ. ಮೂರ್ತಿ ಅವರಿಗೆ ಸಂದಿದೆ. ಇವರು ಈ ಪ್ರಶಸ್ತಿ ಪಡೆಯುತ್ತಿರುವ ೨ನೇ ಕನ್ನಡಿಗರಾಗಿದ್ದಾರೆ. ಪ್ರಥಮ ಪ್ರಶಸ್ತಿ ಡಾ. ರಾಜಕುಮಾರ್ ಅವರಿಗೆ ಸಂದಿತ್ತು.

'ಪದ್ಮಭೂಷಣ ಪ್ರಶಸ್ತಿ' (೨೦೦೯) : ಹಿಂದೂಸ್ತಾನಿ ಗಾಯಕ ಶ್ರೀ ಪುಟ್ಟರಾಜ ಗವಾಯಿ, ಆದಿಚುಂಚನಗಿರಿ ಮಠದ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ, ಖ್ಯಾತ ವೈದ್ಯ ಹಾಗೂ ಪ್ರಜಾವಾಣಿಯ ಅಂಕಣಕಾರ ಡಾ.ಬಿ.ಎಂ. ಹೆಗ್ಡೆ ಅವರಿಗೆ ಸಂದಿದೆ.

ಪದ್ಮಶ್ರೀ ಪ್ರಶಸ್ತಿ (೨೦೦೯) : ರಂಗಕಲಾವಿದೆ **ಅರುಂಧತಿನಾಗ್**, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕಿ ಡಾ. ವಿಜಯಲಕ್ಷ್ಮಿ **ರವೀಂದ್ರನಾಥ್, ಪ್ರೊ. ಎಂ.ಆರ್.** ಸತ್ಯನಾರಾಯಣರಾವ್, ಡಾ. **ಕೊಡಗನೂರು ಎಸ್. ಗೋಪಿನಾಥ್**, ಡಾ. ಬಿ. ರಮಣರಾವ್

- **ಅನುವಾದ ಪ್ರಶಸ್ತಿ - ೨೦೦೯**: ಭೀಷ್ಮ ಸಹಾನಿಯವರ ಪ್ರಾತಿನಿಧಿಕ ಹಿಂದಿಕತೆಗಳನ್ನು ಕನ್ನಡಕ್ಕೆ ಅನುವಾದಿಸಿರುವುದಕ್ಕೆ **ಶ್ರೀ ಡಿ.ಎನ್. ಶ್ರೀನಾಥ್** ಅವರಿಗೆ, ಡಾ. ಜಿ.ಎಸ್. ಶಿವರುದ್ರಪ್ಪ ರವರ ಕವನ ಸಂಕಲನವನ್ನು ಹಿಂದಿಗೆ ಭಾಷಾಂತರಿಸುವುದಕ್ಕೆ **ಶ್ರೀ ಬಾಲಚಂದ್ರ ಜಯಶೆಟ್ಟಿ** ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾಂತರ ಪ್ರಶಸ್ತಿಗಳು ಸಂದಿವೆ.
- **ಸಾಹಿತ್ಯೇತರ ಪ್ರಶಸ್ತಿಗಳು (೨೦೦೮)**: ಟಿ. ಚೌಡಯ್ಯ ಪ್ರಶಸ್ತಿ- **ಶ್ರೀ ಎ.ಕೆ. ನಟರಾಜನ್**, ಕನಕ ಪುರಂದರ ಪ್ರಶಸ್ತಿ, ಶ್ರೀಮತಿ **ಎನ್. ಚೊಕ್ಕಮ್ಮ**; ಡಾ. ಗುಬ್ಬಿ ವೀರಣ್ಣ ಪ್ರಶಸ್ತಿ, **ಶ್ರೀ ಎಚ್.ಟಿ ಅರಸು**; ವರ್ಣಶಿಲ್ಪಿವೆಂಕಟಪ್ಪ ಪ್ರಶಸ್ತಿ - **ಶ್ರೀ ಎಂ.ಬಿ. ಪಾಟೀಲ್**. ಜನಪದ ಶ್ರೀ ಪ್ರಶಸ್ತಿ - ಶ್ರೀ ಸಿದ್ದಪ್ಪಮೇಟಿ; ಶಾಂತಲಾ ನಾಟ್ಯ ಪ್ರಶಸ್ತಿ; **ಶ್ರೀ ಕೆ.ಎಂ. ರಾಮನ್**, ಜಕಣಾಚಾರಿ ಪ್ರಶಸ್ತಿ, **ಶ್ರೀ ಆರ್. ವೀರಭದ್ರಾಚಾರ್**-ಸಂತ ಶಿಶುನಾಳ ಪ್ರಶಸ್ತಿ-**ಶ್ರೀ ಗುಡಿಬಂಡೆ ರಾಮಾಚಾರ್**; ದಾನಚಿಂತಾಮಣಿ ಪ್ರಶಸ್ತಿ - **ಡಾ. ವಿಜಯಾದಬ್ಬೆ** ಅವರಿಗೆ ನೀಡಲಾಗುವುದೆಂದು ಕರ್ನಾಟಕ ಸರ್ಕಾರ ಘೋಷಿಸಿದೆ.

ಮೇಲ್ಕಂಡ ಎಲ್ಲಾ ಸನ್ಮಾನ್ಯರುಗಳಿಗೆ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಹಾರ್ದಿಕ ಅಭಿನಂದನೆಯೊಡನೆ ಶುಭಾಶಯ ಕೋರುತ್ತದೆ. ❒

ತೆರೆದ-ಅಂಚೆ

ಅಚ್ಚಾದ ಪುಸ್ತಕ

ಶ್ರೀಮತಿ/ಶ್ರೀ..
....
....
....

ಏಸ
ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ಶ್ರೀ. ಕಲಾಭವನ, ೩ನೇ ಮುಖ್ಯರಸ್ತೆ
ಸಿಂಹರಾಜ ಕಾಲೋನಿ
ಂಗಳೂರು - ೧೯
ೂರವಾಣಿ : ೨೬೬೧೫೮೭೭

ಮುದ್ರಕರು : ಇಳಾ ಮುದ್ರಾ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು - ೨೬. ✆ : ೨೬೭೫೭೧೫೯
'ವಾರ್ತಾಪತ್ರ' ಪ್ರಾಯೋಜಕರು: ಇಳಾ ಮುದ್ರಾ, ಬೆಂಗಳೂರು-೨೬.